بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّی عَلٰی رَسُوْلِہِ الْکَرِیْمِ    وَعَلٰی عَبْدِہِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ವಾರ್ಷಿಕ ಶುಲ್ಕ ರೂ.600/-

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 44-45

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

03, 10 ನವೆಂಬರ್ 2022, 07, 14 ನಬುವ್ವತ್ 1401 ಹಿಜರಿ ಶಮ್‌ಸಿ,
03, 07 ರಬೀ ಉಸ್ಸಾನಿ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

مَنْ يَّهْدِ اللّٰهُ
فَهُوَ الْمُهْتَدِیْ ۚ
وَمَنْ يُّضْلِلْ
فَاُولٰٓئِكَ هُمُ الْخٰسِرُوْنَ۝
(الاعراف:179)

ಅಂದರೆ: ಅಲ್ಲಾಹನು ಯಾರನ್ನು ಸತ್ಪಥದಲ್ಲಿ ನಡೆಸುತ್ತಾನೋ ಅವನೇ ಸರಿಯಾದ ಮಾರ್ಗವನ್ನು ಪಡೆದವನು. ಅವನು ಯಾರನ್ನು ದಾರಿಪಡ್ಡಿದವರೆಂದು ತೀರ್ಮಾನಿಸುತ್ತಾನೋ ಅವರೇ ನಷ್ಟಹೊಂದಿದವರು.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ಮೂರು ಜನರೊಂದಿಗೆ ಅಲ್ಲಾಹನು ಖಿಯಾಮತ್ ದಿನದಂದು ಜಗಳವಾಡುತ್ತಾನೆ**

(2227) ಹಝ್ರತ್ ಅಬು ಹುರೈರಾ(ರ) ಅವರು ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಹೇಳಿದರು: ಅಲ್ಲಾಹನು ನುಡಿಯುತ್ತಾನೆ: ಖಿಯಾಮತ್ (ಪುನರುತ್ಥಾನದ) ದಿನದಂದು ನಾನು ಜಗಳವಾಡುವ ಮೂರು ಜನರಿದ್ದಾರೆ. ನನ್ನ ಹೆಸರು ತೆಗೆದುಕೊಂಡು ಯಾರಿಗಾದರೂ ವಾಗ್ದಾನ ಮಾಡಿ ದ್ರೋಹ ಬಗೆದ ವ್ಯಕ್ತಿ. ಎರಡನೆಯವನು ಸ್ವತಂತ್ರ ಮನುಷ್ಯನನ್ನು ಮಾರಿ ಅವನ ಬೆಲೆಯನ್ನು ತಿಂದವನು. ಮೂರನೆಯದಾಗಿ, ಒಬ್ಬ ಕೂಲಿಕಾರನನ್ನು ನೇಮಿಸಿಕೊಂಡು ಅವನಿಂದ ಪೂರ್ಣ ಕೆಲಸವನ್ನು ತೆಗೆದುಕೊಂಡರೂ ಅವನ ಕೂಲಿಯನ್ನು ನೀಡದ ವ್ಯಕ್ತಿ.

**ಯಾವ ನೆರೆಹೊರೆಯು ಹೆಚ್ಚು ಅರ್ಹರು?**

(2259) ಹಝ್ರತ್ ಆಯಿಷಾ(ರ) ಅವರು ಹೀಗೆ ಹೇಳಿದರು: ಯಾ ರಸೂಲಲ್ಲಾಹ್!! ನನಗೆ ಇಬ್ಬರು ನೆರೆಹೊರೆಯವರಿದ್ದಾರೆ, ನಾನು ಯಾರಿಗೆ ಉಡುಗೊರೆಗಳನ್ನು ಕಳುಹಿಸಬೇಕು? ಅದಕ್ಕೆ ಪ್ರವಾದಿ(ಸ) ಹೇಳಿದರು: ಇಬ್ಬರಲ್ಲಿ, ಯಾರ ಬಾಗಿಲು ನಿಮಗೆ ಹತ್ತಿರದಲ್ಲಿದೆಯೋ ಅವರಿಗೆ.

**ಉದ್ಯೋಗಾಕಾಂಕ್ಷಿಗಳು ಅಥವಾ ಹುದ್ದೆಕಾಂಕ್ಷಿಗಳು**

(2261) ಹಝ್ರತ್ ಅಬೂ ಮೂಸ ಅಶ್‌ಅರಿ(ರ) ವರದಿ ಮಾಡುತ್ತಾರೆ ನಾನು (ಯೆಮನ್‌ನಿಂದ) ಪ್ರವಾದಿ(ಸ) ಅವರ ಬಳಿಗೆ ಬಂದಿದ್ದೇನೆ ಮತ್ತು ನನ್ನೊಂದಿಗೆ ಅಶ್‌ಅರ್ ಗೋತ್ರದ ಇಬ್ಬರು ಜನರಿದ್ದರು (ಕೆಲವು ಸೇವೆಯನ್ನು ಬಯಸುತ್ತಿದ್ದವರು, ಅವರು ಅದನ್ನು ಪವಿತ್ರ ಪ್ರವಾದಿ(ಸ) ಅವರಿಂದ ವಿನಂತಿಸಿದರು) ಅದಕ್ಕೆ ನಾನು ಹೇಳಿದೆ: ಈ ಇಬ್ಬರು ಕೆಲಸ ಮಾಡಲು ಬಯಸುತ್ತಾರೆ ಎಂದು ನನಗೆ ತಿಳಿದಿರಲಿಲ್ಲ. ಅದಕ್ಕೆ ಪ್ರವಾದಿ(ಸ) ಹೇಳಿದರು: ನಾವು ನಮ್ಮ ಕೆಲಸ ಮಾಡಲು ಬಯಸಿದ ಜನರನ್ನು ನಾವು ನೇಮಿಸಿಕೊಳ್ಳುವುದಿಲ್ಲ. (ವರದಿಗಾರರು ಹೇಳಿದರು ಪ್ರವಾದಿ(ಸ) ಅವರು ಮಾತನಾಡುವಾಗ) **ಲನ್ ನಸ್ತಅ್‌ಮಿಲ್** ಅಥವಾ **ಲಾ ನಸ್ತಅ್‌ಮಿಲು** ಎಂದು ಹೇಳಿದರು.

**(ಬುಖಾರಿ, ಸಂಪುಟ-4, 2008 ರಲ್ಲಿ ಪ್ರಕಟಿತ, ಖಾದಿಯಾನ್)**

**ಸರ್ವಶಕ್ತನಾದ ಅಲ್ಲಾಹನು ನಮಗೆ ತಿಳಿಸಿರುವ ವಿಷಯವು ಸತ್ಯವಾಗಿದೆ, ಮಸೀಹರು ಯಾವುದೇ ರಕ್ತಸಿಕ್ತ ಯುದ್ಧವನ್ನು ಮಾಡುವುದಿಲ್ಲ ಮತ್ತು ಯಾವುದೇ ಕತ್ತಿ ಹಿಡಿದು ಯುದ್ಧವಾಡುವುದು ಅವರ ನಿಲುವಾಗಿರುವುದಿಲ್ಲ, ಅವರು ಸುಧಾರಣೆಗಾಗಿ ಆಗಮಿಸುತ್ತಾರೆ, ಇದು ಹದೀಸ್‌ಗಳ ಉದ್ದೇಶವೂ ಆಗಿದೆ. ಹೌದು, ನಮ್ಮ ನಂಬಿಕೆಯು ಸಹ ಇದೇ ಆಗಿದೆ, ಎಂದರೆ ಅವರ ಕರ್ತವ್ಯ ಕೆಡಕನ್ನು ತಡೆಯುವುದಾಗಿರುತ್ತದೆ ಎಂದು ನಾನು ನಂಬುತ್ತೇನೆ. ಆದರೆ ಅವರು ಅದನ್ನು ಪುರಾವೆಗಳಿಂದ ಮಾಡುವರು.**

## ಸಯ್ಯಿದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಬಾಹ್ಯವಾಗಿ ಮಸೀಹರ ಕೆಲಸವೇನು? ಅವರಿಗೆ ಈ ಹೆಸರನ್ನು ನೀಡಿದವರು ಯಾರು, ಮಸಿಹ್ ಇಬ್ನ್ ಮರ್ಯಮ್ ಅವರ ಕೆಲಸವು ದುಷ್ಟತನವನ್ನು ನಿವಾರಿಸುವುದು ಹಾಗೂ ಮಹದಿಯ ಕೆಲಸವು ಒಳ್ಳೆಯದನ್ನು ಗಳಿಸುವುದಾಗಿತ್ತು. ಆದುದರಿಂದ ಯೋಚಿಸಬೇಕಾದ ವಿಷಯ ಎಂದರೆ ಮಸೀಹರ ಕಾರ್ಯವು **ಯಖ್ತುಲುಲ್ ಖಿಂಝೀರ** ಮತ್ತು **ಯಕ್ಸಿರುಸ್ಸಲೀಬ** ಹಂದಿಗಳನ್ನು ಕಡಿಯುವುದು, ಶಿಲುಬೆಗಳನ್ನು ಮುರಿಯುವುದು ಎಂದು ತಿಳಿಸಲಾಗಿದೆ. ಇದು ದುಷ್ಟತನವನ್ನು ನಿವಾರಿಸುವುದು ಎಂದಾಗಿದೆ, ಆದರೆ ಅವನು ಕತ್ತಿಯೊಂದಿಗೆ ಯುದ್ಧಕ್ಕೆ ಹೊರಡುತ್ತಾನೆ ಎಂಬುದು ನಮ್ಮ ಅರ್ಥವಲ್ಲ.

ಅವರು ಯುದ್ಧಮಾಡುವವರು ಎಂದು ಹೇಳುವ ವಿದ್ವಾಂಸರ ಮಾತು ಸೂಕ್ತವಲ್ಲ. ಅದು ಸಂಪೂರ್ಣ ತಪ್ಪಾಗಿದೆ. ಇದು ಎಂತಹ ಸುಧಾರಣೆಯಾಯಿತು? ಅಂದರೆ ಅವರು ಬಂದ ತಕ್ಷಣ ಕತ್ತಿಯನ್ನು ತೆಗೆದುಕೊಂಡು ಹೋರಾಟಕ್ಕಾಗಿ ಮೈದಾನಕ್ಕೆ ಹೋಗುತ್ತಾರೆ ಎಂದಲ್ಲ, ಹೀಗೆ ಸಂಭವಿಸಲು ಸಾಧ್ಯವಿಲ್ಲ. ಸರ್ವಶಕ್ತನಾದ ಅಲ್ಲಾಹನು ನಮಗೆ ತಿಳಿಸಿರುವ ವಿಷಯವು ಸತ್ಯವಾಗಿದೆ, ಮಸೀಹರು ಯಾವುದೇ ರಕ್ತಸಿಕ್ತ ಯುದ್ಧವನ್ನು ಮಾಡುವುದಿಲ್ಲ ಮತ್ತು ಯಾವುದೇ ಕತ್ತಿ ಹಿಡಿದು ಯುದ್ಧವಾಡುವುದು ಅವರ ನಿಲುವು ಆಗಿರುವುದಿಲ್ಲ. ಬದಲಿಗೆ ಅವರು ಸುಧಾರಣೆಗಾಗಿ ಆಗಮಿಸುತ್ತಾರೆ, ಇದು ಹದೀಸ್‌ಗಳ ಉದ್ದೇಶವೂ ಆಗಿದೆ. ಹೌದು ಅವರ ಕರ್ತವ್ಯವೂ ದುಷ್ಟತನವನ್ನು ತಡೆಯುವುದಾಗಿರುತ್ತದೆ ಎಂದು ನಾನು ನಂಬುತ್ತೇನೆ. ಆದರೆ ಅವರು ಅದನ್ನು ಪುರಾವೆಗಳಿಂದ ಮಾಡುವರು.

ಮಹದಿಯ ಕೆಲಸವು ಒಳ್ಳೆಯದನ್ನು ಗಳಿಸುವುದಾಗಿದೆ, ಅಂದರೆ ಧರ್ಮದ್ರೋಹ, ಅನೈತಿಕತೆ ಮತ್ತು ಅನೈತಿಕತೆಯ ಹರಡುವಿಕೆಯನ್ನು ಅವರು ಮಾರ್ಗದರ್ಶನದೊಂದಿಗೆ ಬದಲಾಯಿಸುತ್ತಾರೆ. ಈಸ ಎಂಬ ಪದವು **ಔಸ್**‌ನಿಂದ ತೆಗೆದುಕೊಳ್ಳಲಾಗಿದೆ ಅದು ದುಷ್ಟತನವನ್ನು ತಡೆಯುವ ಕಡೆಗೆ ಸಂಕೇತವಾಗಿದೆ. ಈ ಎರಡು ಸದೃಶರೂಪಗಳಲ್ಲಿ ಪ್ರತಿಯೊಂದರ ಪ್ರಮುಖ ಅಂಶವೆಂದರೆ ಮಹದಿಯ ಸದೃಶರೂಪವು ಪೂರ್ಣಗೊಂಡಿದೆ, ಏಕೆಂದರೆ ಅವರ ಕೆಲಸವು ಒಳ್ಳೆಯದನ್ನು ಹರಡುವುದಾಗಿರುತ್ತದೆ. ಒಳ್ಳೆಯದನ್ನು ಹರಡುವುದು ಕೆಟ್ಟದ್ದನ್ನು ದೂರವಿಡುವುದಕ್ಕಿಂತ ಹೆಚ್ಚು ಪೂರ್ಣವಾಗಿರುತ್ತದೆ. ಯಾವುದಾದರು ವ್ಯಕ್ತಿ ಹಾದಿಯಲ್ಲಿರುವ ಮುಳ್ಳುಗಳನ್ನು ತೆಗೆದುಹಾಕಿದರೆ ನಿಸ್ಸಂದೇಹವಾಗಿ ಈ ಕೆಲಸವು ಒಂದು ದೊಡ್ಡ ಕೆಲಸವಾಗಿರುತ್ತದೆ, ಆದರೆ ಅವನು ಯಾರಿಗಾದರು ಸವಾರಿ ನೀಡಿ ಅವನ ಮನೆಗೆ ಹೋಗಿ ಅವನಿಗೆ ರೊಟ್ಟಿ ತಿನ್ನಿಸುವುದು ಅದಕ್ಕಿಂತ ಉತ್ತಮವಾದ ಕೆಲಸವಾಗಿರುತ್ತದೆ. ಆದ್ದರಿಂದ ಮಹದಿಯು ಪರಿಪೂರ್ಣರಾಗಿದ್ದರಿಂದ ಅವರು ಅಲ್ಲಾಹನ ಖಲೀಫ ಆಗಿರುತ್ತಾರೆ. ಅಲ್ಲಾಹನ ಖಲೀಫರಾದ ಮಹದಿಯನ್ನು ಬೈಅತ್ ಮಾಡುವ ಈಸ ಇಬ್ನ್ ಮರ್ಯಮ್, ರಸೂಲುಲ್ಲಾಹ್(ಸ)ರವರ ಸದೃಶರೂಪರಾಗಿರುತ್ತಾರೆ. ಮತ್ತು ರಸೂಲುಲ್ಲಾಹ್(ಸ) ಅವರು ಖಾತಮುಲ್ ಅಂಬಿಯಾ ಆಗಿದ್ದರು ಮತ್ತು ಅಕ್ಮಲುಲ್ ಅಂಬಿಯಾ (ಪರಿಪೂರ್ಣ ಪ್ರವಾದಿ) ಆಗಿದ್ದರು ಏಕೆಂದರೆ ಅವರ ಸದೃಶರೂಪವು ಸಹ ಪರಿಪೂರ್ಣಗೊಂಡಿರುತ್ತಾರೆ.

ಈ ಎರಡೂ ಸದೃಶರೂಪಗಳಾಗಿದ್ದವು. ವಿದ್ವಾಂಸರು ಎಷ್ಟು ಕ್ರೂರರಾಗಿದ್ದರು, ಒಬ್ಬ ಸದೃಶರೂಪದಲ್ಲಿದ್ದ ಮಹದಿಯು ರಸೂಲುಲ್ಲಾಹ್(ಸ)ರವರ ಪಾತ್ರ ಮತ್ತು ಹೆಸರಿನಲ್ಲಿರುತ್ತಾನೆ ಎಂದು ನಂಬಿದ್ದರು, ಆದರೊಂದಿಗೆ ಅವರು ಈಸಬ್ನು ಮರಿಯಮ್ ಅವರ ಬಗ್ಗೆ ಅವರು ಆಕಾಶದಿಂದ ಕೆಳಗೆ ಬರಬೇಕು ಎಂದು ನಂಬಿದ್ದರು. ವಿರೋಧಾಭಾಸಗಳನ್ನು ಸೃಷ್ಟಿಸುವ ಮತ್ತು ಅರ್ಥಮಾಡಿಕೊಳ್ಳದ ಮನಸ್ಸುಗಳು ಎಷ್ಟು ವಿಸ್ಮಯಕಾರಿಯಾಗಿ ಮಾರ್ಪಟ್ಟಿವೆ. ಒಂದು ಸ್ಥಳದಲ್ಲಿ ರಸೂಲುಲ್ಲಾಹ್(ಸ) ರವರ ಸದೃಶರೂಪವನ್ನು (ಬುರೋಝನ್ನು) ಒಪ್ಪಿಕೊಂಡರು ಮತ್ತು ಅವರ ಉಪನಾಯಕರು ಅಲ್ಲಾಹನ ಖಲೀಫ ಆದರು, ಆದರೆ ನಂತರ ಆಗಿದ್ದೇನು ಚಿಕ್ಕವರಾದವರು ಏಕೆ ಸ್ವತಃ ಬರಬೇಕಾಯಿತು? ಒಳ್ಳೆಯದನ್ನು ತಲುಪಿಸಬೇಕಾದ ಆ ಮಹದಿಯು ಪರಿಪೂರ್ಣರೂ ಆಗಿದ್ದರು. ಅವರಿಗೆ ಸದೃಶರೂಪದಲ್ಲಿ ತರಬೇಕಾಗಿತ್ತು ಮತ್ತು ಮಸೀಹ್ ಇಬ್ನ್ ಮರಿಯಮ್ ಅವರನ್ನು ಬೈಅತ್ ಮಾಡುವ ಸಲುವಾಗಿ ಸ್ವತಃ ಕೆಳಗಿಳಿಸಲಾಗುತ್ತದೆ.

**(ಮಲ್‌ಫುಝಾತ್, ಸಂಪುಟ-1, ಪುಟ 407, ಮುದ್ರಿತ ಖಾದಿಯಾನ್ 2018)**

# ಖುತ್‌ಬ ಜುಮುಅ

**ನಮ್ಮ ಜಮಾಅತಿನವರಿಗೆ ವಿಶಿಷ್ಟವಾದ ದೇವಭಕ್ತಿಯ ಆವಶ್ಯಕತೆಯಿದೆ. ತಾನು ಅಲ್ಲಾಹನಿಂದ ಕಳುಹಿಸಿದ ವ್ಯಕ್ತಿಯಾಗಿದ್ದೇನೆ ಎಂದು ವಾದಿಸುವ ಒಬ್ಬರ ಜೊತೆಗೆ ಸಂಬಂಧವಿರಿಸಿರುವ ಕಾರಣದಿಂದ ವಿಶೇಷವಾಗಿ ಇದರ ಆವಶ್ಯಕತೆಯಿದೆ. ಹೀಗಾದರೆ, ಎಂತಹದ್ದೇ ರೀತಿಯ ಹಗೆ, ದ್ವೇಷಗಳು, ಶಿರ್ಕ್ ಅಥವಾ ಲೌಕಿಕತೆಯಲ್ಲಿ ಮುಳುಗಿರುವ ಜನರು ಕೂಡ ಈ ಎಲ್ಲ ವಿಪತ್ತುಗಳಿಂದ ಮುಕ್ತರಾಗುವರು**

**ಇಂದಿಗೆ ನೂರ ಇಪ್ಪತ್ತು ವರ್ಷಗಳ ಹಿಂದೆ ಯಾವ ಸುಳ್ಳುವಾದಿ ಮತ್ತು ಇಸ್ಲಾಮಿನ ಶತ್ರುವಿನ ನಾಶದ ಬಗ್ಗೆ ಅಲ್ಲಾಹನಿಂದ ಮಾಹಿತಿ ಪಡೆದು ಹಝ್ರ‌ತ್ ಮಸೀಹ್ ಮೌಊದ್(ಅ) ಭವಿಷ್ಯವಾಣಿ ನುಡಿದರೋ, ಇಂದು ಅವನ ಪಟ್ಟಣದಲ್ಲಿ ಅಹ್ಮದಿಯಾ ಜಮಾಅತಿಗೆ ಮಸೀದಿ ನಿರ್ಮಿಸಲು ಅಲ್ಲಾಹನು ಸೌಭಾಗ್ಯ ನೀಡಿರುವನು**

**ಡೂಯಿಯ ದಾರುಣ ಅಂತ್ಯದ ಬಗ್ಗೆ ಮಹಾನಾದ ಮಸೀಹ್ ಮಿರ್ಝಾ ಗುಲಾಂ ಅಹ್ಮದ್ ತಿಳಿಸಿದ್ದರು.**

**ನಾವು ಮುಸ್ಲಿಮರನ್ನು ಕೂಡ ಏಕಧರ್ಮದಲ್ಲಿ ಒಟ್ಟುಸೇರಿಸಿ ಅವರೊಳಗಿನಿಂದ ಎಲ್ಲ ನವೀನಾಚಾರಗಳನ್ನು ಕೊನೆಗೊಳಿಸಬೇಕಾಗಿದೆ. ಮುಸ್ಲಿಮೇತರರಿಗೂ ಇಸ್ಲಾಮಿನ ಸುಂದರ ಅಧ್ಯಾಪನೆಗಳನ್ನು ಪರಿಚಯಪಡಿಸಿ ಅವರನ್ನು ಏಕದೇವನ ಆರಾಧನೆ ಮಾಡುವವರನ್ನಾಗಿಯೂ ಹಝ್ರ‌ತ್ ಪೈಗಂಬರ್(ಸ)ರ ಮೇಲೆ ದುರೂದ್ ಕಳುಹಿಸುವವರನ್ನಾಗಿಯೂ ಮಾಡಬೇಕಾಗಿದೆ**

**ನಾವು ನಮ್ಮ ಜೀವಿತದ ಉದ್ದೇಶವನ್ನು ಮನವರಿಕೆ ಮಾಡುವಾಗಲೇ ಇಂದಿನ ಈ ಮಸೀದಿಯ ಉದ್ಘಾಟನೆ ಮಹೋನ್ನತವಾಗುವುದು.**

**ಹಝ್ರ‌ತ್ ಮಸೀಹ್ ಮೌಊದ್(ಅ)ರ ಮೂಲಕ ಲಭಿಸುತ್ತಿರುವ ವಿಜಯವನ್ನು ಸತತವಾದ ತಬ್ಲೀಗ್ ಮತ್ತು ದುಆಗಳಿಂದ ಸ್ಥಿರಗೊಳಿಸುವ ಆವಶ್ಯಕತೆಯಿದೆ**

**ನಾವು ಲೋಕವನ್ನು ಹಝ್ರ‌ತ್ ಪೈಗಂಬರ್(ಸ)ರ ಪಾದಗಳ ಕೆಳಗೆ ತರುವ ದಿನದಂದೇ ನಮಗೆ ಯಥಾರ್ಥವಾದ ಸಂತೋಷ ಉಂಟಾಗುವುದು. ಆದ್ದರಿಂದ ಈಗ ನಾವು ಈ ಮಸೀದಿಯ ನಿರ್ಮಾಣದೊಂದಿಗೆ ತಬ್ಲೀಗಿನ ಹೊಸ ಮಾರ್ಗಗಳನ್ನು ಹುಡುಕಬೇಕಾಗುವುದು.**

**ಅಮೇರಿಕಾದ ಝಿಯಾನ್‌ನ ಮಸ್ಜಿದ್ "ಫತ್‌ಹೇ ಅಝೀಮ್"ನ ಉದ್ಘಾಟನಾ ಸಂದರ್ಭದಲ್ಲಿ, ಜಮಾಅತ್ತಿನ ಸದಸ್ಯರನ್ನು ಮಸೀದಿಗಳ ಹಕ್ಕನ್ನು ನೀಡಲು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬೋಧನೆಗಳನ್ನು ಅನುಸರಿಸಲು ಉಪದೇಶ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಎಸ್.ಎ ಝಿಯೋನ್‌ನ **'ಮಸ್ಜಿದ್ ಫತ್‌ಹೇ ಅಝೀಮ್'** ನಿಂದ **30-09-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيمِ - بِسْمِ اللهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಇಲ್ಲಿ ನೀವಿಂದು ಝಿಯೋನಿನ ಮಸೀದಿಯ ಉದ್ಘಾಟನೆಗಾಗಿ ಬಂದು ಸೇರಿದ್ದೀರಿ. ಈ ಪಟ್ಟಣದಲ್ಲಿ ಈ ಮಸೀದಿಯ ನಿರ್ಮಾಣ ಮಾಡಲು ಅಲ್ಲಾಹನು ಅಮೇರಿಕಾದ ಅಹ್ಮದಿಯಾ ಜಮಾಅತಿಗೆ ಸೌಭಾಗ್ಯ ನೀಡಿರುವನು. ಈ ಪಟ್ಟಣ ಅಹ್ಮದಿಯಾ ಜಮಾಅತಿನ ಚರಿತ್ರೆಯಲ್ಲಿ ವಿಶೇಷವಾದೊಂದು ಪ್ರಾಮುಖ್ಯವನ್ನು ಪಡೆದಿದೆ. ಇಲ್ಲಿ ಈ ಮಸೀದಿಗೆ ಇಷ್ಟು ಪ್ರಾಮುಖ್ಯವೇಕೆಂದು ಎರಡು ದಿನಗಳ ಹಿಂದೆ ಒಬ್ಬ ಪತ್ರಕರ್ತ ನನ್ನೊಡನೆ ಪ್ರಶ್ನಿಸಿದ್ದರು. ನಾನು ಅವರೊಡನೆ ಹೀಗೆ ಹೇಳಿದ್ದೆ: ಎಲ್ಲ ಮಸೀದಿಗಳು ನಮಗೆ ಮುಖ್ಯವೇ ಆಗಿದೆ. ನಾನು ಕೇವಲ ಈ ಮಸೀದಿಗಾಗಿ ವಿಶೇಷವಾಗಿ ಬಂದಿದ್ದೇನೆ ಎಂದಾಗಿತ್ತು ಅವರ ಯೋಚನೆ. ಮಸೀದಿಯ ಉದ್ಘಾಟನೆಗಾಗಿ ಇದಕ್ಕಿಂತ ಮುಂಚೆಯೂ ಹಲವೆಡೆ ಹೋಗುತ್ತಿರುತ್ತೇನೆ. ಹೇಗಿದ್ದರೂ ಈ ಮಸೀದಿಗೂ ಒಂದು ಪ್ರಾಮುಖ್ಯತೆಯಿದೆ. ಅದೇನೆಂದರೆ, ಇಸ್ಲಾಮಿನ ಒಬ್ಬ ವಿರೋಧಿಯಿಂದ ಜನವಸತಿಗೊಂಡ ಪಟ್ಟಣದಲ್ಲಿ ನಮ್ಮ ಈ ಮಸೀದಿ ನಿರ್ಮಾಣವಾಗಿದೆ. ಚರಿತ್ರೆಯ ಬಗ್ಗೆ ಅಭಿರುಚಿ ಇರುವವರು ಈ ಚರಿತ್ರೆಯನ್ನು ತಿಳಿಯಲು ಮತ್ತು ಹೇಳಲು ಪ್ರಯತ್ನಿಸುವರು. ಏಕೆಂದರೆ, ಅಹ್ಮದಿಯಾ ಜಮಾಅತಿಗೆ ಅಲ್ಲದೇ ಬೇರೆ ಯಾರಿಗೂ ಈ ಪಟ್ಟಣದ ಚರಿತ್ರೆ ಗೊತ್ತಿಲ್ಲ. ಯಾರಿಗೂ ಡೂಯಿಯ ಪರಿಚಯವೂ ಇಲ್ಲ. ಅಭಿರುಚಿ ಇರುವವರು ಸ್ವಲ್ಪಮಟ್ಟಿಗೆ ಇಲ್ಲಿ ತಯಾರಿಸಲಾಗಿರುವ ಎಕ್ಸಿಬಿಶನ್‌ನಿಂದಲೂ ಪ್ರಯೋಜನ ಪಡೆಯಬಹುದಾಗಿದೆ. ನಾಳೆ ಅದರ ಬಗ್ಗೆ ಲೇಖನವನ್ನು ಕೂಡ ಬಹುಶಃ ಬರೆಯಬಹುದು. ಹೇಗಿದ್ದರೂ ನಾನು ಹೇಳಿದಂತೆ, ಈ ಪಟ್ಟಣದ ಚಾರಿತ್ರಿಕ ಪ್ರಾಧಾನ್ಯ, ಒಬ್ಬ ನಾಮಧಾರಿ ವಾದಿಯು ಹಝ್ರ‌ತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ವಿರುದ್ಧ ಕೆಟ್ಟ ಭಾಷೆಯನ್ನು ಪ್ರಯೋಗಿಸಿದ ಕಾರಣದಿಂದ ಅವನ ಅಂತ್ಯವಾಗುವುದು, ಈ ಪಟ್ಟಣದಲ್ಲಿ ನಮ್ಮ ಜಮಾಅತಿನ ಸ್ಥಾಪನೆಯಾಗುವುದು. ಇವೆಲ್ಲವೂ ಒಬ್ಬ ಅಹ್ಮದಿಯನ್ನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವವನನ್ನಾಗಿ ಮಾಡುತ್ತದೆ ಮತ್ತು ಮಾಡಬೇಕು. ಅದಕ್ಕಾಗಿ ನಾವು ಹಝ್ರ‌ತ್ ಪೈಗಂಬರ್(ಸ)ರ ಉಪದೇಶ ಪ್ರಕಾರ ಈ ಪಟ್ಟಣದ ನಿವಾಸಿಗಳಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಆರಂಭದಲ್ಲಿ ಇಲ್ಲಿನ ಮಸೀದಿಯ ನಿರ್ಮಾಣವನ್ನು ವಿರೋಧಿಸಿದರೂ ಇಲ್ಲಿಯ ಜನರು ನಮ್ಮ ಪರವಾಗಿ ನಿಂತುಕೊಂಡು ನಮಗೆ ಮಸೀದಿ ನಿರ್ಮಾಣ ಮಾಡಲು ಕೌನ್ಸಿಲ್ ಅನುಮತಿ ನೀಡುವಂತೆ ಒತ್ತಾಯಪಡಿಸಿದರು.

ಜನರಿಗೆ ಕೃತಜ್ಞತೆ ಅರ್ಪಿಸದವನು ಅಲ್ಲಾಹನಿಗೂ ಕೃತಜ್ಞತೆ ಅರ್ಪಿಸುವುದಿಲ್ಲವೆಂಬ ಹಝ್ರ‌ತ್ ಪೈಗಂಬರ್(ಸ)ರ ನಿರ್ದೇಶನ ಪ್ರಕಾರ ಜನರಿಗೂ ಧನ್ಯವಾದಗಳನ್ನು ಅರ್ಪಿಸಬೇಕು. (ಸುನನ್ ಅತ್ತಿರ್ಮಿಝಿ, ಹದೀಸ್-1954)

ಒಟ್ಟಿನಲ್ಲಿ ನಾವು ಈ ನಿರ್ದೇಶನ ಪ್ರಕಾರ, ಈ ಮಸೀದಿಯನ್ನು ನಿರ್ಮಾಣ ಮಾಡಲು ಸೌಭಾಗ್ಯ ನೀಡಿದ ಮಹೋನ್ನತನಾದ ಅಲ್ಲಾಹನಿಗೆ ಕೃತಜ್ಞತೆಯನ್ನು ಅರ್ಪಿಸಬೇಕು. ಈ ರೀತಿಯಲ್ಲಿ ಅಹ್ಮದಿಗಳಾದ ನಮಗೆ ಇಂದು ಇದು ಕೇವಲ ಒಂದು ಸಂತೋಷದ ದಿನ ಮಾತ್ರವಲ್ಲ. ಬದಲಾಗಿ ಅತಿಯಾಗಿ ಕೃತಜ್ಞತೆ ಅರ್ಪಿಸಬೇಕಾದ ದಿನವೂ ಆಗಿದೆ. ಅಲ್ಲಾಹನು ನಮಗೆ ಈ ಮಸೀದಿಯ ನಿರ್ಮಾಣದ ಜೊತೆಗೆ ಈ ಕಾಲಘಟ್ಟದ ಇಮಾಂ ಮತ್ತು ಹಝ್ರ‌ತ್ ಪೈಗಂಬರ್(ಸ)ರ ಸತ್ಯಪ್ರೇಮಿಯ ಸತ್ಯತೆಗೆ ತಾಜಾ ದೃಷ್ಟಾಂತವನ್ನು ತೋರಿಸಿಕೊಟ್ಟಿದ್ದಾನೆ.

ಆ ಕಾಲಘಟ್ಟದ ಚರಿತ್ರೆಯ ಪುಟಗಳಿಂದಲೂ ಕೆಲವು ಸಂಗತಿಗಳನ್ನು ಪ್ರಸ್ತಾಪಿಸುತ್ತೇನೆ. ಅವುಗಳಿಂದ ಇದರ ಪ್ರಾಮುಖ್ಯತೆ, ಹಝ್ರ‌ತ್ ಮಸೀಹ್ ಮೌಊದ್(ಅ)ರ ಸತ್ಯತೆ ಮತ್ತು ಜನರು ಅದನ್ನು ಒಪ್ಪಿಕೊಂಡಿದ್ದರು ಎಂಬುದು ತಿಳಿದುಬರುತ್ತದೆ. ನಾವು ಎಷ್ಟು ಅಧಿಕ ಕೃತಜ್ಞತೆ ಅರ್ಪಿಸುವವರಾಗುವೆವೋ ಅಷ್ಟೇ ಅಲ್ಲಾಹನು ನಮಗೆ ತನ್ನ ಅನುಗ್ರಹಗಳಿಂದ

ದಯಪಾಲಿಸುತ್ತಿರುವನು ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಸತ್ಯತೆಯ ಕುರುಹುಗಳು ಸ್ಪಷ್ಟವಾಗುತ್ತಾ ಹೋಗುವುವು.

ಒಟ್ಟಿನಲ್ಲಿ, ನಾವು ಕೃತಜ್ಞತೆ ಅರ್ಪಿಸುವ ಅವಸ್ಥೆಯು ನಮ್ಮನ್ನು ಈ ದೃಷ್ಟಾಂತಗಳ ಸತ್ಯತೆಗೆ ಸಾಕ್ಷಿಗಳನ್ನಾಗಿ ಮಾಡುವುದು. ನಿಸ್ಸಂಶಯವಾಗಿಯೂ ಜಮಾಅತಿನ ಪ್ರಗತಿಯು ಕುರಿತು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಅಲ್ಲಾಹನು ಮಾಡಿರುವ ಅನೇಕ ವಾಗ್ದಾನಗಳಿವೆ. ಅಲ್ಲಾಹನು ಅವರಿಗೆ ಜಮಾಅತಿನ ಅಭಿವೃದ್ಧಿಯನ್ನು ತೋರಿಸಿದ್ದನು, ತೋರಿಸುತ್ತಿದ್ದಾನೆ, ಮುಂದೆಯೂ ತೋರಿಸುವನು. ಆದರೆ ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವವರಾದರೆ, ಅಲ್ಲಾಹನ ಆಜ್ಞೆಗಳನ್ನು ಪಾಲಿಸುವವರಾದರೆ ಮತ್ತು ಅದಕ್ಕೆ ಸಂಬಂಧಿಸಿದ ಕರ್ತವ್ಯಗಳನ್ನು ಮಾಡುವವರಾದರೆ ಮಾತ್ರ ನಾವು ಈ ಪ್ರಗತಿಗಳನ್ನು ನೋಡಲು ಮತ್ತು ಅವುಗಳ ಪಾಲುಗಾರರಾಗಲು ಅರ್ಹರಾಗುವೆವು.

ನಾವು ನಮ್ಮ ಜೀವಿತದಲ್ಲೇ ಈಡೇರಿದ್ದಾಗಿ ಕಂಡ ಅನೇಕ ವಾಗ್ದಾನಗಳಿವೆ. ಅಲ್ಲಾಹನು ಅವುಗಳ ಸರಿಯಾದ ಸಮಯಗಳಲ್ಲಿ ಎಲ್ಲ ವಾಗ್ದಾನಗಳು ಈಡೇರುವ ದೃಶ್ಯಗಳನ್ನು ತೋರಿಸುತ್ತಿದ್ದಾನೆ. ಇದು ವಾಗ್ದಾನಗಳು ಈಡೇರುವ ದೃಶ್ಯವಲ್ಲದೇ ಬೇರೇನು? ಇಂದಿಗೆ ನೂರ ಇಪ್ಪತ್ತು ವರ್ಷಗಳ ಹಿಂದೆ ಯಾವ ಸುಳ್ಳುವಾದಿ ಮತ್ತು ಇಸ್ಲಾಮಿನ ಶತ್ರುವಿನ ನಾಶದ ಬಗ್ಗೆ ಅಲ್ಲಾಹನಿಂದ ಮಾಹಿತಿ ಪಡೆದು ಹಝ್ರತ್ ಮಸೀಹ್ ಮೌಊದ್(ಅ) ಭವಿಷ್ಯವಾಣಿ ನುಡಿದರೋ, ಇಂದು ಅವನ ಪಟ್ಟಣದಲ್ಲಿ ಅಹ್ಮದಿಯಾ ಜಮಾಅತಿಗೆ ಮಸೀದಿ ನಿರ್ಮಿಸಲು ಅಲ್ಲಾಹನು ಸೌಭಾಗ್ಯ ನೀಡಿರುವನು. ಯಾವುದೇ ಮುಸ್ಲಿಮನಿಗೆ ಕ್ರೈಸ್ತನಾಗುವ ತನಕ ಅಲ್ಲಿಗೆ ಪ್ರವೇಶಿಸಲು ಅನುಮತಿ ಇರದು ಎಂದು ಡೋಯಿ ಅಂದು ಘೋಷಿಸಿದ್ದನು.

ಇದು ಅಲ್ಲಾಹನ ಕೆಲಸವಾಗಿದೆ. ಓರ್ವ ಕೋಟಿಪತಿ ಮತ್ತು ಭೌತಿಕ ವೈಭವವನ್ನು ಹೊಂದಿದ್ದ ವ್ಯಕ್ತಿಯನ್ನು ಅಲ್ಲಾಹನು ಸುಳ್ಳಾಗಿಸಿದನು ಮತ್ತು ಕೊನೆಗೊಳಿಸಿದನು. ಅದೇ ವೇಳೆ ಪಂಜಾಬಿನ ಒಂದು ಸಣ್ಣ ಗ್ರಾಮದಲ್ಲಿ ಇದ್ದುಕೊಂಡು ಇಸ್ಲಾಮಿನ ಪುನರುಜ್ಜೀವನದ ಬಗ್ಗೆ ವಾದಿಸಿದ ತನ್ನ ಪ್ರವಾದಿಯ ವಾದವನ್ನು ಲೋಕದ ಇನ್ನೂರ ಇಪ್ಪತ್ತು ದೇಶಗಳಲ್ಲಿ ಪ್ರತಿಧ್ವನಿಸುವಂತೆ ಮಾಡಿದನು. ಆದರೆ ಇದರಿಂದ ನಮ್ಮ ಕೆಲಸ ಇಲ್ಲಿಗೆ ಮುಗಿಯಿತೇ? ಅಮೇರಿಕದ ಒಂದು ಸಣ್ಣ ಪಟ್ಟಣದಲ್ಲಿ ನಾವು ಮಸೀದಿ ಮಾಡಿದ್ದೇವೆ ಮತ್ತು ಜಮಾಅತಿಗೆ ಪ್ರಗತಿ ಲಭಿಸಿದೆ ಎಂಬುದೇ ಸಾಕೇ? ಇಲ್ಲ.

ಹಝ್ರತ್ ಮಸೀಹ್ ಮೌಊದ್(ಅ)ರಿಗಾಗಿ ಅಲ್ಲಾಹನು ಪೂರ್ತಿ ಲೋಕವನ್ನು ಕರ್ಮ ಮೈದಾನವನ್ನಾಗಿ ಮಾಡಿದ್ದಾನೆ. ನಾವಂತು ಪ್ರತಿಯೊಂದು ಚಿಕ್ಕ ಪಟ್ಟಣ, ದೊಡ್ಡ ಪಟ್ಟಣ ಮತ್ತು ದೇಶಗಳನ್ನು ಹಝ್ರತ್ ಪೈಗಂಬರ್(ಸ)ರ ಅಧೀನಕ್ಕೆ ತರಬೇಕಾಗಿದೆ. ನಮಗಿರುವ ಪರಿಮಿತವಾದ ಸೌಕರ್ಯಗಳನ್ನು ನೋಡುವಾಗ ಇದು ಬಹಳ ದೊಡ್ಡದಾದ ಕೆಲಸವೆಂದು ತೋರುತ್ತದೆ. ಹೀಗಿದ್ದರೂ ಅಲ್ಲಾಹನು ಈ ಕೆಲಸವನ್ನು ನಮಗೆ ಒಪ್ಪಿಸಿರುವನು. ಇದು ಕೂಡ ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಅಲ್ಲಾಹನು ಮಾಡಿರುವ ವಾಗ್ದಾನವಾಗಿದೆ. ಆದರೆ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿರುವರು: ನಾವು ಮಾಡುತ್ತಿರುವ ಕೆಲಸಗಳು ನಮ್ಮ ಮಾಮೂಲಿ ಪ್ರಯತ್ನಗಳಾಗಿವೆ. ಸತ್ಯದಲ್ಲಿ ಅವುಗಳ ಜೊತೆಗೆ ಪ್ರಾರ್ಥನೆಗಳ ಆವಶ್ಯಕತೆಯಿದೆ. ದುಆಗಳಿಂದಲೇ ಕೆಲಸಗಳು ನಡೆಯುವುವು.

ಆದ್ದರಿಂದ ಈ ಮುಖ್ಯವಾದ ಸಂಗತಿಯನ್ನು ನಾವು ಸದಾ ನಮ್ಮ ಮುಂದಿರಿಸಬೇಕಾಗಿದೆ. ದುಆಗಳ ಕಡೆಗೆ ಗಮನಹರಿಸಬೇಕು. ಆರಾಧನೆಗಾಗಿ ಜನರು ಬಂದುಸೇರಲು, ದಿನನಿತ್ಯ ಐದು ಹೊತ್ತಿನ ನಮಾಝಿಗಾಗಿ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗಲು, ನಿಯತವಾಗಿ ಜುಮಾ ನಿರ್ವಹಿಸಲಿಕ್ಕಾಗಿಯೇ ಮಸೀದಿಗಳ ನಿರ್ಮಾಣವಾಗುತ್ತವೆ. ಭೌತಿಕವಾದ ಆಟ, ವಿನೋದ ಮತ್ತು ಕೆಲಸಗಳ ಕಾರಣದಿಂದ ಆರಾಧನೆಗಳನ್ನು ಮರೆಯಬಾರದು. ನಾವು ನಮ್ಮ ಆರಾಧನೆಗಳನ್ನು ಮರೆತುಬಿಡುವುದಾದರೆ, ಮಸೀದಿಯ ನಿರ್ಮಾಣ ಮಾಡುವುದು ಎಂಬುದು ಕೇವಲ ಬಾಹ್ಯವಾದ ಕಟ್ಟಡವೊಂದನ್ನು ಕಟ್ಟುವುದಾಗುವುದು. ಇಲ್ಲಿ ಮುಸ್ಲಿಮರ ಒಂದು ಮಸೀದಿಯು ನಿರ್ಮಾಣವಾಗಿದೆ ಎಂದು ಮಾತ್ರ ನಾವು ಲೋಕಕ್ಕೆ ಹೇಳುವವರಾಗುವೆವು ಅಷ್ಟೇ. ಈ ಮಸೀದಿಯ ಅನುಗ್ರಹಗಳಿಂದ ಪ್ರಯೋಜನ ಪಡೆಯುವಂತಹ ಸತ್ಕರ್ಮಗಳು ನಮ್ಮಲ್ಲಿ ಇರದು. ಅಥವಾ ನಾವು ಹಝ್ರತ್ ಮಸೀಹ್ ಮೌಊದ್(ಅ)ರ ಸಹಾಯಕರಲ್ಲೂ ಒಳಪಡಲಾರೆವು. "ಅಲ್ಲಾಹನ ಅನುಗ್ರಹಗಳು ಬೇಗನೇ ಈಡೇರುವುದಾಗಿ ನಾವು ನೋಡುವಂತಾಗಲು ಸತತವಾದ ದುಆಗಳೊಂದಿಗೆ ನನಗೆ ಸಹಾಯಕರಾಗಿರಿ" ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವರು.

ಆದ್ದರಿಂದ ಅಂಗೀಕಾರ್ಹವಾದ ದುಆಗಳಿಗಾಗಿ ನಾವು ನಮ್ಮ ಆರಾಧನೆಗಳನ್ನು ಜೀವಿತದ ಭಾಗವನ್ನಾಗಿ ಮಾಡುವುದು ಇಂದು ನಮ್ಮಲ್ಲಿ ಪ್ರತಿಯೊಬ್ಬರ ಕರ್ತವ್ಯವಾಗಿದೆ. ತಮ್ಮ ಮಕ್ಕಳಲ್ಲೂ ಆರಾಧನೆಯ ಅಭ್ಯಾಸವನ್ನು ಉಂಟುಮಾಡಿರಿ, ಅಲ್ಲಾಹನು ಹೇಳಿದ ವಿಧಾನಗಳ ಪ್ರಕಾರ ತಮ್ಮ ನಮಾಝ್‌ಗಳನ್ನು ಉತ್ತಮವಾಗಿ ನಿರ್ವಹಿಸಿರಿ, ಪ್ರಾಮಾಣಿಕವಾಗಿ ಅಲ್ಲಾಹನ ಮುಂದೆ ಬಾಗಿರಿ, ಇನ್ನಷ್ಟು ವಿಜಯಗಳ ಸೌಭಾಗ್ಯ ನೀಡುವಂತೆ ಅವನಲ್ಲಿ ಬೇಡಿರಿ. ನಮ್ಮವರಲ್ಲಿ ಈ ಎಲ್ಲವನ್ನೂ ಗಳಿಸುವವರು ಮತ್ತು ಅಲ್ಲಾಹನ ವರದಾನಗಳ ಮಳೆಯನ್ನು ವರ್ಷಿಸುವುದಾಗಿ ನೋಡುವವರು ಎಷ್ಟು ಸೌಭಾಗ್ಯಶಾಲಿಗಳು! ನಾವು ನಮ್ಮ ಆರಾಧನೆಗಳ ಮಟ್ಟವನ್ನು ಉನ್ನತಗೊಳಿಸಿದರೆ, ಧರ್ಮಕ್ಕೆ ಲೌಕಿಕತೆಗಿಂತ ಆದ್ಯತೆ ನೀಡುವುದಾದರೆ, ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಅಲ್ಲಾಹನು ಮಾಡಿರುವ ವಾಗ್ದಾನಗಳನ್ನು ನಮ್ಮ ಜೀವಿತದಲ್ಲಿ ಈಡೇರುವುದಾಗಿ ನಾವು ನೋಡುವೆವು.

ಆದ್ದರಿಂದ ನಮ್ಮ ಅವಸ್ಥೆಗಳ ಬಗ್ಗೆ ಗಮನಹರಿಸಬೇಕಾದ ಆವಶ್ಯಕತೆಯಿದೆ. ಈ ಅಭಿವೃದ್ಧಿಗೊಂಡ ದೇಶಗಳಿಗೆ ಬಂದು ಲೌಕಿಕತೆಯಲ್ಲಿ ಮುಳುಗಬೇಡಿರಿ. ಈಗ ಕೆಲವು ವರ್ಷಗಳಿಂದ ಹೊಸ ಅಭಯಾರ್ಥಿಗಳು ಕೂಡ ಬಂದಿರುವರು. ಒಟ್ಟಿನಲ್ಲಿ ಭೌತಿಕತೆಯಲ್ಲಿ ಮುಳುಗಬೇಡಿರಿ. ಇಲ್ಲಿ ನಿರ್ಮಾಣವಾಗುವ ಮಸೀದಿಯಿಂದ ಹೊಸ ಆವೇಶ, ಹುಮ್ಮಸ್ಸು ಮತ್ತು ಅಲ್ಲಾಹನೊಂದಿಗೆ ಸಂಬಂಧ ನಮ್ಮೊಳಗೆ ಉಂಟಾಗುವಂತೆ ಆಗಬೇಕು. ಅಲ್ಲಾಹನು ತನ್ನ ವಾಗ್ದಾನಗಳನ್ನು ಈಡೇರಿಸುವನು. ನಮ್ಮ ಕೃತ್ಯಗಳ ಕಾರಣದಿಂದ ವಾಗ್ದಾನಗಳು ಈಡೇರುವ ಸಮಯ ದೂರವಾಗದಿರಲಿ. ಅಥವಾ ಬೇರೆಯವರ ಮೂಲಕ, ನಂತರ ಬರುವ ಜನರ ಮೂಲಕ ವಾಗ್ದಾನಗಳು ಈಡೇರಿಕೊಂಡು ನಾವು ಅವುಗಳಿಂದ ವಂಚಿತರಾಗುವಂತೆ ಆಗದಿರಲಿ. ಇಸ್ಲಾಮಿನ ವಿಜಯದ ವಾಗ್ದಾನವನ್ನು ಅಲ್ಲಾಹನು ಹಝ್ರತ್ ಪೈಗಂಬರ್(ಸ)ರಿಗೆ ನೀಡಿದ್ದನು. ಅಲ್ಲಾಹನಿಗೆ ಹಝ್ರತ್ ಪೈಗಂಬರ್(ಸ)ರಿಗಿಂತ ಹೆಚ್ಚು ಪ್ರಿಯ ಯಾರಿರಬಹುದು?

ಇಸ್ಲಾಮಿನ ವಿಜಯದ ವಾಗ್ದಾನ ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲಾಹನು ನೀಡಿದ್ದರೂ ಕೂಡ ಬದ್ರ್ ಯುದ್ಧದ ಸಂದರ್ಭದಲ್ಲಿ, ಹಝ್ರತ್ ಪೈಗಂಬರ್(ಸ)ರ ಅಳಲು, ವಿನಯವಂತಿಕೆ, ದೇವಭಯ, ದೇವಭಕ್ತಿ ಮತ್ತು ಪ್ರಾರ್ಥನೆಯು ಒಂದು ಮಹತ್ತಾದ ಮಟ್ಟವನ್ನು ತಲುಪಲಿಲ್ಲವೇ? ಎಷ್ಟೆಂದು ಅಳಲಿನ ಅವಸ್ಥೆಯಾಗಿತ್ತು ಎಂದರೆ, ಅವರ ತೋಳಿನಿಂದ ಪದೇ ಪದೇ ಹೊದಿಕೆ ಜಾರಿ ಹೋಗುತ್ತಿತ್ತು. ಅನಂತರ ಹಝ್ರತ್ ಪೈಗಂಬರ್(ಸ)ರೊಡನೆ ಹಝ್ರತ್ ಅಬೂಬಕರ್(ರ) ಕೇಳಿದರು: ಯಾ ರಸೂಲುಲ್ಲಾಹ್, ಅಲ್ಲಾಹನ ವತಿಯಿಂದ ವಿಜಯ ಮತ್ತು ಸಹಾಯದ ವಾಗ್ದಾನವಿದ್ದರೂ ನೀವೇಕೆ ಇಷ್ಟೊಂದು ಅಸಮಾಧಾನದಲ್ಲಿದ್ದೀರಿ? ಆಗ ಹಝ್ರತ್ ಪೈಗಂಬರ್(ಸ) ಹೇಳಿದರು:

"ಅಲ್ಲಾಹನು ಯಾರನ್ನೂ ಆಶ್ರಯಿಸಿಲ್ಲ, ವಿಜಯಗಳಲ್ಲೂ ರಹಸ್ಯವಾದ ನಿಬಂಧನೆಗಳು ಇರುತ್ತವೆ. ಆದ್ದರಿಂದ ಅತ್ಯಂತ ನಮ್ರತೆಯಿಂದ ಅಲ್ಲಾಹನಿಂದ ಸಹಾಯ ಬೇಡುವುದು ನನ್ನ ಕೆಲಸವಾಗಿದೆ." (ಮಲ್‌ಫೂಝಾತ್, ಸಂಪುಟ-1, ಪುಟ-11)

ಬೇರೆ ಬೇರೆ ಸಂದರ್ಭಗಳಲ್ಲಿ ಶತ್ರುಗಳು ದಾಳಿ ನಡೆಸಿ ನಷ್ಟ ಉಂಟುಮಾಡಿದ್ದರೂ ಕೆಲವೇ ವರ್ಷಗಳಲ್ಲಿ ಅಲ್ಲಾಹನು ಎಂತಹ ವಿಜಯವನ್ನು ನೀಡಿದ್ದನು ಎಂದರೆ, ಅಂತಹ ವಿಜಯವನ್ನು ಚರಿತ್ರೆಯು ಇಂದಿನ ತನಕ ನೋಡಿಯೂ ಇಲ್ಲ, ಆಲಿಸಿಯೂ ಇಲ್ಲ. ಕೊಲ್ಲಲು ಬಂದವರು ಮುಸ್ಲಿಮರಾದರು ಎಂದು ಮಾತ್ರವಲ್ಲ, ಹಝ್ರತ್ ಪೈಗಂಬರ್(ಸ)ರ ಪ್ರೇಮಿಗಳಾದರು. ಅವರು ತಮ್ಮ ಜೀವಗಳನ್ನು ತ್ಯಾಗಮಾಡಲು ಸಿದ್ಧರಾದರು. ಯಾವುದೇ ಶತ್ರು ನಮ್ಮ ಮೃತಶರೀರವನ್ನು ದಾಟದೆ ಹಝ್ರತ್ ಪೈಗಂಬರ್(ಸ)ರ ಬಳಿಗೆ ತಲುಪಲಾರನು ಎಂದು ಲೋಕದ ಮುಂದೆ ಅವರು ತೋರಿಸಿದರು. ಯಾರ ಅದೃಷ್ಟದಲ್ಲಿ ನಿಂದೆ ಮತ್ತು ಅಪಮಾನ ಬರೆಯಲಾಗಿತ್ತೋ ಅವರನ್ನು ಅಲ್ಲಾಹನು ನಾಶಮಾಡಿದನು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನಲ್ಲಿ ಲೀನನಾದ ಒಬ್ಬ ವ್ಯಕ್ತಿಯ ಪ್ರಾರ್ಥನೆಯಿಂದಲೇ ಮಹತ್ತಾದ ಬದಲಾವಣೆಗಳು ಉಂಟಾದುವು. (ಬರಕಾತುದ್ದುಆ, ರೂಹಾನಿ ಖಝಾಇನ್, ಸಂಪುಟ-6, ಪುಟ-11)

ಆದ್ದರಿಂದ ಇಂದು ಕೂಡ ಅಲ್ಲಾಹನಲ್ಲಿ ಲೀನರಾದ ಹಝ್ರತ್ ಪೈಗಂಬರ್(ಸ)ರ ಸತ್ಯಪ್ರೇಮಿಯ ದುಆಗಳೇ ತನ್ನ ಸರಿಯಾದ ಸಮಯದಲ್ಲಿ ಸ್ವೀಕಾರಗೊಂಡು ಲೋಕವನ್ನು ಹಝ್ರತ್ ಪೈಗಂಬರ್(ಸ)ರ ಪಾದಗಳ ಕೆಳಗೆ ತರುವುದು. ಆದರೆ "ನನ್ನೊಂದಿಗೆ ಸಂಬಂಧವಿರಿಸಿಕೊಂಡವರು ತಮ್ಮ ದುಆಗಳಿಂದಲೂ ಸತ್ಕರ್ಮಗಳಿಂದಲೂ ನನಗೆ ನೆರವು ನೀಡಿರಿ ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವರು.

ಇಂದು ನಾವು ಈ ಮಸೀದಿಯಲ್ಲಿ ಕುಳಿತುಕೊಂಡು ಇದರ ಉದ್ಘಾಟನೆ ಮಾಡುತ್ತಿದ್ದೇವೆ. ಇದರ ಹೆಸರು ಕೂಡ **ಫತ್‌ಹೇ ಅಝೀಂ ಮಸ್‌ಜಿದ್** (ಮಹತ್ತಾದ ವಿಜಯ) ಎಂದು ಇರಿಸಲಾಗಿದೆ. ಈ ಹೆಸರನ್ನು

ಹರ್ಝ್‌ರತ್ ಮಸೀಹ್ ಮೌಊದ್(ಅ)ರಿಗೆ ಲಭಿಸಿದ ದಿವ್ಯವಾಣಿ ಮತ್ತು ಭವಿಷ್ಯವಾಣಿ ಪ್ರಕಾರ ಇರಿಸಲಾಗಿದೆ. ಅಲ್ಲಾಹನಿಂದ ಮಾಹಿತಿ ಪಡೆದು ಹರ್ಝ್‌ರತ್ ಮಸೀಹ್ ಮೌಊದ್(ಅ) ಡೋಯಿಯ ನಾಶದ ಬಗ್ಗೆ ಭವಿಷ್ಯವಾಣಿ ನುಡಿದಿದ್ದರು ಮತ್ತು "ಈ ದೃಷ್ಟಾಂತದಲ್ಲಿ ಮಹತ್ತಾದ ವಿಜಯ (ಫತ್‌ಹೇ ಅಝೀಂ) ಸಮೀಪ ಕಾಲದಲ್ಲೇ ಪ್ರಕಟಗೊಳ್ಳುವುದು" ಎಂದು ಹೇಳಿದ್ದರು. ಹದಿನೈದು ಇಪ್ಪತು ದಿನಗಳ ಒಳಗೆ ಅಲ್ಲಾಹನು ಆತನನ್ನು ಅಪಮಾನಿತನನ್ನಾಗಿ ಮಾಡಿಕೊಂಡು ನಾಶ ಮಾಡಿದ್ದನ್ನು ಲೋಕವು ಕಂಡಿತು. ಅಲ್ಲಾಹನು ಅವನೊಂದಿಗೆ ಹೇಗೆ ವರ್ತಿಸಿದನು ಎಂಬುದು ಬೇರೊಂದು ವಿವರಣೆಯಾಗಿದೆ. ಹೇಗಿದ್ದರೂ ಅವನ ನಾಶದ ದೃಷ್ಟಾಂತವನ್ನು ಅಲ್ಲಾಹನು ತಿಳಿಸಿದ ಪ್ರಕಾರ ಮಹತ್ತಾದ ವಿಜಯವೆಂದು ಹರ್ಝ್‌ರತ್ ಮಸೀಹ್ ಮೌಊದ್(ಅ) ಹೇಳಿದರು. ಇಂದು ಅದರ ಮುಂದಿನ ಹೆಜ್ಜೆಯಾಗಿ ನಾವು ಈ ಪಟ್ಟಣದಲ್ಲಿ ಮಸೀದಿಯ ಉದ್ಘಾಟನೆಯನ್ನು ಮಾಡುತ್ತಿದ್ದೇವೆ. ಹರ್ಝ್‌ರತ್ ಮಸೀಹ್ ಮೌಊದ್(ಅ)ರಿಗೆ ಲಭಿಸಿದ ದಿವ್ಯವಾಣಿಯ ಒಂದು ಭಾಗವನ್ನು ನಾವು ಸುಮಾರು 115 ವರ್ಷಗಳ ಹಿಂದೆ ಈಡೇರಿದ್ದಾಗಿ ನಾವು ಕಂಡಿದ್ದೇವೆ ಮತ್ತು ಅದರ ಮುಂದಿನ ಹೆಜ್ಜೆಯನ್ನು ಇಂದು ಈಡೇರುತ್ತಿರುವುದಾಗಿ ನಾವು ನೋಡುತ್ತಿದ್ದೇವೆ.

115 ವರ್ಷಗಳ ಹಿಂದೆ ಹರ್ಝ್‌ರತ್ ಮಸೀಹ್ ಮೌಊದ್(ಅ)ರ ಪಂಥಾಹ್ವಾನ ಮತ್ತು ಅವನ ನಾಶದ ಬಗ್ಗೆ ಆ ಕಾಲದ ವಾರ್ತಾಪತ್ರಿಕೆಗಳಲ್ಲಿ ಅಲ್ಲಾಹನು ಪ್ರಕಟಗೊಳ್ಳುವಂತೆ ಮಾಡಿದ್ದನು. ಇದು ಅಲ್ಲಾಹನು ದೃಷ್ಟಾಂತವಾಗಿತ್ತು. ಅದನ್ನು ಲೋಕವು ಒಪ್ಪಿತು. ಒಂದು ಪತ್ರದ ಕೆಲವು ಭಾಗಗಳನ್ನು ನಾನಿಲ್ಲಿ ನಿಮಗೆ ಓದಿ ಹೇಳುತ್ತೇನೆ. 1907, ಜೂನ್ 23ರಂದು ಹರ್ಝ್‌ರತ್ ಮಸೀಹ್ ಮೌಊದ್(ಅ)ರ ಪರಿಚಯ, ವಾದ, ಪಂಥಾಹ್ವಾನ ಮತ್ತು ಡೋಯಿಯ ಅಪಮಾನಕರವಾದ ನಾಶದ ಬಗ್ಗೆ **ಸಂಡೇ ಬೋಸ್ಟನ್ ಹೆರಾಲ್ಡ್** ವಾರ್ತಾಪತ್ರಿಕೆಯಲ್ಲಿ ಪ್ರಕಟಗೊಂಡಿತು. ಅದರ ಶೀರ್ಷಿಕೆ ಹೀಗಿತ್ತು.

**ಡೋಯಿಯ ದಾರುಣ ಅಂತ್ಯದ ಬಗ್ಗೆ ಮಹಾನಾದ ಮಸೀಹ್ ಮಿರ್ಝಾ ಗ್ಹುಲಾಂ ಅಹ್ಮದ್ ತಿಳಿಸಿದ್ದರು. ಈಗ ಅವರು ಪ್ಲೇಗ್, ಪ್ರವಾಹಗಳು ಮತ್ತು ಭೂಕಂಪಗಳ ಬಗ್ಗೆ ಭವಿಷ್ಯ ನುಡಿಯುತ್ತಿದ್ದಾರೆ.** ಆ ಪತ್ರಿಕೆಯಲ್ಲಿ ಹೀಗೆ ಬರೆಯಲಾಗಿತ್ತು: ಆಗಸ್ಟ್ 23ರಂದು ಎರಡನೇ ಏಲಿಯಾ ಎಂದು ಕರೆಯಲ್ಪಡುತ್ತಿದ್ದ ಅಲೆಕ್ಸಾಂಡರ್ ಡೋಯಿಯ ಮರಣದ ಬಗ್ಗೆ ಭಾರತದ ಖಾದಿಯಾನಿನ ಮಿರ್ಝಾ ಗುಲಾಂ ಅಹ್ಮದ್ ಭವಿಷ್ಯ ನುಡಿದಿದ್ದರು. ಅದು ಕಳೆದ ಮಾರ್ಚ್ ತಿಂಗಳಲ್ಲಿ ಈಡೇರಿದೆ. ಈ ಇಂಡಿಯನ್ ವ್ಯಕ್ತಿ ಲೋಕದ ಪೂರ್ವ ಪ್ರದೇಶದಲ್ಲಿ ಅನೇಕ ವರ್ಷಗಳಿಂದ ಪ್ರಸಿದ್ಧಿಯನ್ನು ಪಡೆದಿರುವರು. ಕೊನೆಗಾಲದಲ್ಲಿ ಆಗಮಿಸಬೇಕಾಗಿದ್ದ ಸತ್ಯ ಮಸೀಹ್ ತಾನಾಗಿರುವೆನು ಮತ್ತು ಅಲ್ಲಾಹನು ತನಗೆ ಗೌರವ ನೀಡಿರುವನು ಎಂದಾಗಿದೆ ಅವರ ವಾದ. ಅಮೇರಿಕದಲ್ಲಿ ಮೊದಲ ಬಾರಿ ಅದರ ಪ್ರಸ್ತಾಪ 1903ರಲ್ಲಿ ನಡೆದಿತ್ತು. ಏಲಿಯ ಎಂದು ಕರೆಯಲ್ಪಡುವ ಅಲೆಕ್ಸಾಂಡರ್‌ರ ವಿರುದ್ಧವಾಗಿ ಅವರ ನಿಂತಿರುವುದು ಆಗ ಬಯಲಾಯಿತು. ಡೋಯಿಯ ಮರಣದ ನಂತರ ಇಂಡಿಯನ್ ಪ್ರವಾದಿಯು ಪ್ರಸಿದ್ಧಿಯ ಉತ್ತುಂಗಕ್ಕೆ ತಲುಪಿದರು. ಏಕೆಂದರೆ ಮಿರ್ಝಾ ಸಾಹಿಬ್‌ರ ಜೀವಿತದಲ್ಲೇ ಅತ್ಯಂತ ದುಃಖ ಮತ್ತು ಕಷ್ಟತೆಯೊಂದಿಗೆ ಡೋಯಿ ಸಾಯುವನು ಎಂದು ಹೇಳಲಾಗಿತ್ತು. ಅವರು ಹೀಗೆ ಹೇಳಿದ್ದರು: ಮಿಸ್ಟರ್ ಡೋಯಿ ನನ್ನ ಕಡೆಯಿಂದ ಇರುವ ದುಆದ ಪಂಥಾಹ್ವಾನವನ್ನು ಬಹಿರಂಗವಾಗಿ ಅಥವಾ ಸೂಚನಾ ರೂಪದಲ್ಲಿ ಸ್ವೀಕಾರ ಮಾಡಿಕೊಂಡು ನನ್ನ ವಿರುದ್ಧ ನಿಂತರೆ, ಅವನು ಬಹಳ ದುಃಖದಿಂದ ಮತ್ತು ಅಪಮಾನಿತನಾಗಿ ಲೋಕವನ್ನು ತೊರೆಯುವನು. ನನ್ನ ಎದುರಾಗಿ ನಿಲ್ಲದೇ ಓಡಿ ಹೋಗುವವನಾದರೆ, ಈ ವಿಧಾನದಿಂದಲೂ ಅವನು ಪರಾಜಿತನಾದನು ಎಂಬುದಕ್ಕೆ ಅಮೇರಿಕ ಮತ್ತು ಯೂರೋಪಿನ ಜನರು ಸಾಕ್ಷಿಗಳಾಗುವರು. ಇದರಿಂದ ತಾನು ಏಲಿಯ ಎಂದು ಹೇಳಿಕೊಂಡು ಅವನು ಮಾಡಿರುವ ವಾದವು ಮೋಸಗಾರಿಕೆಯಾಗಿತ್ತು ಎಂದು ಜನಸಾಮಾನ್ಯರು ತಿಳಿಯುವರು. ಇಂತಹ ಮುಖಾಮುಖಿಯಿಂದ ದೂರವಿದ್ದು ಮರಣದಿಂದ ಪರಾರಿಯಾಗಲು ಪ್ರಯತ್ನಿಸುವುದು ಕೂಡ ಒಂದು ಮರಣವಾಗಿದೆ. ಖಂಡಿತವಾಗಿಯೂ ಅವನ ಝಿಯಾಯಿನ್ ಪಟ್ಟಣದಲ್ಲಿ ಬೇಗನೇ ಒಂದು ಆಪತ್ತು ಬರಲಿದೆ. ಈಗ ನಾನು ನನ್ನ ವಿಷಯವನ್ನು ದುಆದೊಂದಿಗೆ ಕೊನೆಗೊಳಿಸುತ್ತೇನೆ. ಪ್ರವಾದಿಗಳ ಮುಂದೆ ಪ್ರಕಟವಾಗುತ್ತಿದ್ದ ಮತ್ತು ಪ್ರಕಟವಾಗುತ್ತಿರುವ ಹೇ ಶಕ್ತನೂ ಪರಿಪೂರ್ಣನೂ ಆದ ದೇವಾ, ಪಿಗಟ್ ಮತ್ತು ಡೋಯಿಯ ಸುಳ್ಳನ್ನು ಬೇಗನೇ ಜನರಿಗೆ ತಿಳಿಸಿಕೊಂಡು ನೀನು ತೀರ್ಪು ನೀಡು. ಏಕೆಂದರೆ, ಈ ಕಾಲದಲ್ಲಿ ನಿನ್ನ ದಾಸರು ನಮ್ಮಂಥ ಮನುಷ್ಯರ ಆರಾಧನೆಯಲ್ಲಿ ಬಂಧಿತಗೊಂಡು ನಿನ್ನಿಂದ ಬಹಳ ದೂರ ಹೋಗಿಬಿಟ್ಟಿರುವರು.

ಪತ್ರಿಕೆ ಮುಂದುವರೆಸುತ್ತಾ ಹೀಗೆ ಬರೆಯುತ್ತದೆ: ಆರಂಭದಲ್ಲಿ ದೂರದ ಪೂರ್ವ ದಿಕ್ಕಿನಿಂದ ಬಂದ ಈ ಪಂಥಾಹ್ವಾನಕ್ಕೆ ಜನಸಾಮಾನ್ಯರು ಯಾವುದೇ ಗಮನ ನೀಡಿರಲಿಲ್ಲ. ಆದರೆ 1903, ಸೆಪ್ಟೆಂಬರ್ 26ರಂದು ಅವನು ತನ್ನ ಝಿಯಾಯಿನ್ ಸಿಟಿ ಪಬ್ಲಿಕೇಶನಿನಲ್ಲಿ ಹೀಗೆ ಬರೆದನು: ನೀವೇಕೆ ಈ ಮಾತುಗಳಿಗೆ ಉತ್ತರ ನೀಡುತ್ತಿಲ್ಲವೆಂದು ಜನರು ಕೇಳುತ್ತಾರೆ. ಈ ಸೊಳ್ಳೆಗಳಿಗೂ ನೊಣಗಳಿಗೂ ನಾನು ಉತ್ತರಿಸುವೆನು ಎಂದು ನೀವು ಭಾವಿಸುತ್ತೀರಾ? ನಾನು ಅದರ ಮೇಲೆ ನನ್ನ ಕಾಲನ್ನು ಇರಿಸಿದರೆ, ಅದು ತುಳಿದುಹೋಗುವುದು. ಅದು ಹಾರಿಹೋಗಿ ಜೀವಂತವಾಗಿರಲು ನಾನು ಅವಕಾಶ ನೀಡುತ್ತಿದ್ದೇನೆ ಅಷ್ಟೆ. ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್‌ರ ಪರಿಚಯವಿದೆ ಎಂದು ಒಂದು ಬಾರಿ ಅವನು ಹೇಳಿದ್ದನು. ಮೂರ್ಖನಾದ ಮುಹಮ್ಮದೀ ಮಸೀಹ್ ಎಂದು ಒಮ್ಮೆ ಅವನು ಹೇಳಿದನು. **ನಊಝುಬಿಲ್ಲಾಹ್**. 1903, ಡಿಸೆಂಬರ್ 12ರಂದು ಅವನು ಹೀಗೆ ಬರೆದನು: ನಾನು ದೇವನ ಪ್ರವಾದಿಯಲ್ಲದಿದ್ದರೆ, ಈ ಭೂಮಿಯಲ್ಲಿ ದೇವನ ಬೇರೆ ಪ್ರವಾದಿಯೂ ಇಲ್ಲ. ಅನಂತರ ಜನವರಿಯಲ್ಲಿ ಅವನು ಹೀಗೆ ಬರೆದನು: ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ಪ್ರದೇಶಗಳಿಂದ ಜನರನ್ನು ಹೊರಗೆ ಹಾಕಿ ಅವರನ್ನು ಈ ಪಟ್ಟಣ ಮತ್ತು ಇತರ ಝಿಯಾಯಿನ್ ಪಟ್ಟಣಗಳಲ್ಲಿ ನೆಲೆಸುವಂತೆ ಮಾಡುವುದು ನನ್ನ ಕೆಲಸವಾಗಿದೆ. ಮುಸ್ಲಿಮರು ಕೊನೆಗೊಳ್ಳುವ ತನಕ ಈ ಕೆಲಸ ಮುಂದುವರೆಯುವುದು. ದೇವನು ನಮಗೆ ಆ ದಿನವನ್ನು ಕಾಣುವಂತೆ ಮಾಡಲಿ.

ವಾರ್ತಾಪತ್ರಿಕೆ ಮುಂದುವರೆಸುತ್ತಾ ಬರೆಯುತ್ತದೆ: ಮಿರ್ಝಾ ಸಾಹಿಬ್ ಅವನನ್ನು ಶಕ್ತವಾಗಿ ಚಾಲೆಂಜ್ ಮಾಡುತ್ತಾ ಹೀಗೆ ಬರೆದರು: ನಮ್ಮಲ್ಲಿ ಯಾರು ಸುಳ್ಳುವಾದಿ ಅವನು ಮೊದಲು ನಾಶವಾಗಲಿ. ಡೋಯಿಯ ಸ್ನೇಹಿತರು ಕೂಡ ಅವನನ್ನು ಬಿಟ್ಟುಹೋದ ಸ್ಥಿತಿಯಲ್ಲಿ ಅವನು ಸಾವನ್ನಪ್ಪಿದನು ಮತ್ತು ದುರ್ಗತಿ ಉಂಟಾಯಿತು. ಅವನು ಲಕ್ವ ಮತ್ತು ಹುಚ್ಚಿನಂತಹ ರೋಗಗಳಿಗೆ ತುತ್ತಾದನು. ಅವನು ದಾರುಣವಾಗಿ ಸತ್ತುಹೋದನು.

ಅದರ ಜೊತೆಗೆ ಝಿಯಾಯಿನ್ ಪಟ್ಟಣವು ಆಂತರಿಕ ಒಡಕಿನ ಕಾರಣದಿಂದ ನಾಶವಾಯಿತು. ಮಿರ್ಝಾ ಸಾಹಿಬ್ ಮುಂದೆ ಬಂದಿರುವರು ಮತ್ತು ಅವರು ಪಂಥಾಹ್ವಾನದ ಭವಿಷ್ಯವಾಣಿಯನ್ನು ಗೆದ್ದಿರುವರು ಎಂದು ಸ್ಪಷ್ಟವಾಗಿ ತಿಳಿಸಿರುವರು. ಅವರು ಘೋಷಿಸಿದಂತೆ ಪ್ರತಿಯೊಬ್ಬ ಸತ್ಯಾನ್ವೇಷಿಯೊಡನೆ ಸತ್ಯವನ್ನು ಸ್ವೀಕಾರ ಮಾಡಲು ಆಮಂತ್ರಣ ನೀಡುತ್ತಿದ್ದಾರೆ. ಅಮೇರಿಕಾಗೆ ಎದುರಾಗಿ ಬಂದ ಈ ಆಪತ್ತನ್ನು ಅವರು ಅಲ್ಲಾಹನ ಪ್ರತೀಕಾರ ಎಂದು ಹೇಳುವುದರೊಂದಿಗೆ ಅಲ್ಲಾಹನ ನ್ಯಾಯಪಾಲನೆಗೆ ಇರುವ ಪುರಾವೆಯಾಗಿದೆ ಎಂಬುದಾಗಿ ಮುಂದಿಡುತ್ತಾರೆ. ಅವರೊಬ್ಬ ಅನುಯಾಯಿ ಹೀಗೆ ಹೇಳುತ್ತಾರೆ: ಶತ್ರುವಿನ ಮರಣದಿಂದ ಸಂತೋಷಗೊಳ್ಳಬಾರದು. ಹೀಗೆ ಸಂತೋಷಗೊಂಡು ಡೋಯಿಯ ಕೆಲವು ರಹಸ್ಯ ಅವಸ್ಥೆಗಳ ಕಡೆಗೆ ಬೊಟ್ಟು ಮಾಡಬಾರದು. ಇಂತಹ ಸಂಗತಿಗಳಿಂದ ನಮ್ಮ ಯೋಚನೆ ಬಹಳ ದೂರವಿದೆ. ನಾವು ಈ ಸತ್ಯತೆಗಳನ್ನು ನಮ್ಮ ಉದ್ದೇಶಕ್ಕಾಗಿ ಮತ್ತು ಸತ್ಯತೆ ಇನ್ನೂ ಹೆಚ್ಚಾಗಿ ಹೊರಬರಲು ಪ್ರಕಟಿಸುತ್ತಿದ್ದೇವೆ. ಮೃತಪಟ್ಟವರ ಬಗ್ಗೆ ಕೆಟ್ಟದಾಗಿ ಹೇಳುವುದನ್ನು ಇಸ್ಲಾಂ ಕಲಿಸುವುದಿಲ್ಲವೆಂಬುದರಲ್ಲಿ ಸಂಶಯವಿಲ್ಲ. ಆದರೆ ಸತ್ಯವನ್ನು ಬಯಲು ಮಾಡುವುದರಿಂದ ಅದು ಸಮಾಜಕ್ಕೆ ಗುಣಕರವೂ ಮತ್ತು ಅದು ಮನುಷ್ಯತ್ವ, ಸತ್ಯತೆ ಮತ್ತು ದೇವನಿಗಾಗಿ ಆಗಿದ್ದರೆ, ಅಂತಹ ಸತ್ಯತೆಗಳನ್ನು ರಹಸ್ಯವಾಗಿ ಇಡಬಾರದು. ಡೋಯಿಯ ಮೇಲೆ ವಿಪತ್ತನ್ನು ಇಳಿಸಿಕೊಂಡು ಮತ್ತು ಕೊನೆಗೆ ಅವನ ಅಕಾಲಿಕ ಮರಣದಿಂದ ದುಃಖ ಮತ್ತು ಶಿಕ್ಷೆಯನ್ನು ಇಳಿಸಿ ಅಲ್ಲಾಹನು ತನ್ನ ತೀರ್ಪನ್ನು ನೀಡಿರುವನು. ಅಲ್ಲಾಹನು ತನ್ನ ಪ್ರವಾದಿಗೆ ಈ ಘಟನೆ ನಡೆಯುವುದೆಂದು ಮೂರು ನಾಲ್ಕು ವರ್ಷಗಳಿಗೆ ಮುಂಚಿತವಾಗಿ ತಿಳಿಸಿದ್ದನು. (Sunday Herald-Boston June 23, 1907- magazine Section)

ಇದು ಒಂದು ಪತ್ರಿಕೆಯ ಉದಾಹರಣೆಯಾಗಿದೆ. ಖಂಡಿತವಾಗಿಯೂ ಇದೊಂದು ವಿಜಯವಾಗಿತ್ತು. ಹರ್ಝ್‌ರತ್ ಮಸೀಹ್ ಮೌಊದ್(ಅ)ರ ಸತ್ಯತೆಗೆ ಪುರಾವೆಯೂ ಆಗಿತ್ತು. ಆದರೆ ನಾನು ಹೇಳಿದಂತೆ ಹರ್ಝ್‌ರತ್ ಮಸೀಹ್ ಮೌಊದ್(ಅ)ರ ದೌತ್ಯ ಮತ್ತು ಕೆಲಸಗಳು ಬಹಳ ವಿಸ್ತಾರವುಳ್ಳದ್ದಾಗಿವೆ. ಇದಂತು ಕೇವಲ ಒಂದು ಯುದ್ಧಭೂಮಿಯ ವಿಜಯ ಮಾತ್ರವಾಗಿದೆ.

ನಾವು ಲೋಕವನ್ನು ಹರ್ಝ್‌ರತ್ ಪೈಗಂಬರ್(ಸ)ರ ಪಾದಗಳ ಕೆಳಗೆ ತರುವ ದಿನದಂದೇ ನಮಗೆ ಯಥಾರ್ಥವಾದ ಸಂತೋಷ ಉಂಟಾಗುವುದು. ಆದ್ದರಿಂದ ಈಗ ನಾವು ಈ ಮಸೀದಿಯ ನಿರ್ಮಾಣದೊಂದಿಗೆ ತಬ್ಲೀಗಿನ ಹೊಸ ಮಾರ್ಗಗಳನ್ನು ಹುಡುಕಬೇಕಾಗುವುದು.

ಮುಹಮ್ಮದೀ ಮಸೀಹ್‌ರ ಪುರಾವೆಗಳನ್ನು ಲೋಕದ ಮುಂದೆ ಇರಿಸಬೇಕಾಗುವುದು, ಮೊದಲಿಗಿಂತ ಹೆಚ್ಚಾಗಿ ನಮ್ಮ ಕರ್ಮಪರವಾದ

ಮತ್ತು ಆಧ್ಯಾತ್ಮಿಕ ಅವಸ್ಥೆಯನ್ನು ಉತ್ತಮಗೊಳಿಸಬೇಕಾಗುವುದು. ನಾನು ಹೇಳಿದಂತೆ ಯಥಾರ್ಥದಲ್ಲಿ ಮಹಾ ವಿಜಯ ಮಕ್ಕಾ ವಿಜಯವಾಗಿತ್ತು. ಏನು, ಮಕ್ಕಾ ವಿಜಯದ ನಂತರ ಹಝ್ರತ್ ಪೈಗಂಬರ್(ಸ) ಮತ್ತು ಖಲೀಫರು ಅಥವಾ ನಂತರದ ಮುಸ್ಲಿಮರು ತಬ್ಲೀಗಿನ ಕೆಲಸವನ್ನು ನಿಲ್ಲಿಸಿದ್ದರೇ? ಇಸ್ಲಾಮಿನ ಸಂದೇಶವನ್ನು ಲೋಕದ ಮೂಲೆಗಳಿಗೆ ತಲುಪಿಸಲು ಅವರು ಪರಿಪೂರ್ಣವಾದ ಪ್ರಯತ್ನ ಮಾಡಿರಲಿಲ್ಲವೇ? ಯುದ್ಧಗಳ ಮೂಲಕ ಪ್ರದೇಶಗಳನ್ನು ಜಯಿಸಿರಲಿಲ್ಲವೇ? ಹೌದು, ಯುದ್ಧಗಳು ಕೂಡ ನಡೆದುವು. ಆದರೆ ಅವು ಧರ್ಮವನ್ನು ಹರಡಲು ಆಗಿರಲಿಲ್ಲ, ಬದಲಾಗಿ ಅವರು ಹೃದಯಗಳನ್ನು ಜಯಿಸುತ್ತಿದ್ದರು. ಅವುಗಳ ಮೂಲಕ ತ್ಯಾಗಶೀಲರಾದ ಜನರು ಗುಂಪುಗುಂಪಾಗಿ ಇಸ್ಲಾಮಿನಲ್ಲಿ ಪ್ರವೇಶಿಸುತ್ತಾ ಹೋದರು. ಆದ್ದರಿಂದ ಹಝ್ರತ್ ಮಸೀಹ್ ಮೌಊದ್(ಅ)ರ ಮೂಲಕ ಲಭಿಸುತ್ತಿರುವ ವಿಜಯವನ್ನು ಸತತವಾದ ತಬ್ಲೀಗ್ ಮತ್ತು ದುಆಗಳಿಂದ ಸ್ಥಿರಗೊಳಿಸುವ ಆವಶ್ಯಕತೆಯಿದೆ.

ಹಝ್ರತ್ ಮಸೀಹ್ ಮೌಊದ್(ಅ)ರ ಅನುಯಾಯಿಗಳು ಆರಂಭ ಕಾಲದ ಮುಸ್ಲಿಮರೊಂದಿಗೆ ಸೇರಿಕೊಂಡವರು ಎಂದು ಗಣಿಸಲ್ಪಡುವವರಾಗಿದ್ದಾರೆ. ಆರಂಭ ಕಾಲದ ಮುಸ್ಲಿಮರು ಮಕ್ಕಾ ವಿಜಯದ ನಂತರ ತಬ್ಲೀಗನ್ನು ನಿಲ್ಲಿಸಿದ್ದರೇ? ಆಧ್ಯಾತ್ಮಿಕ ಮತ್ತು ನೈತಿಕ ಸ್ಥಿತಿಗಳನ್ನು ಉತ್ತಮಗೊಳಿಸುವುದನ್ನು ನಿಲ್ಲಿಸಿದ್ದರೇ? ಆರಾಧನೆಗಳ ಮಟ್ಟವನ್ನು ಕಡಿಮೆಗೊಳಿಸಿದ್ದರೇ? ಈ ಸಂಗತಿಗಳು ಮುಸ್ಲಿಮರಲ್ಲಿ ಇದ್ದ ಕಾಲದ ವರೆಗೂ ಇಸ್ಲಾಂ ಅಭಿವೃದ್ಧಿಗೊಳ್ಳುತ್ತಾ ಹೋಯಿತು. ಲೌಕಿಕತೆಯಲ್ಲಿ ಮುಳುಗಿದಾಗ, ದೇವಭಕ್ತಿಯ ಮಟ್ಟ ಕಡಿಮೆಯಾದಾಗ, ಅರಾಧನೆಯ ಕಡೆಗೆ ಗಮನ ಕಡಿಮೆಯಾದಾಗ ಮುಸ್ಲಿಮರ ಅವನತಿ ಆರಂಭವಾಯಿತು. ಆದರೆ ಖಿಯಾಮತ್ ತನಕ ಈ ಧರ್ಮವನ್ನು ನೆಲೆನಿಲ್ಲಿಸಲು ಮತ್ತು ಸುದೃಢಗೊಳಿಸಲು ಕೊನೆಯ ಕಾಲದಲ್ಲಿ ಮಸೀಹ್ ಮೌಊದ್ ಮತ್ತು ಮಹ್‌ದಿಯನ್ನು ಕಳುಹಿಸುವುದಾಗಿ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರ ಮೂಲಕ ವಾಗ್ದಾನ ಮಾಡಿದ್ದನು. ಅದರಂತೆ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಆಗಮನದ ಬಗ್ಗೆ ಲೋಕಕ್ಕೆ ತಿಳಿಸಿದರು. ಬೇಕಾದ ಸೌಲಭ್ಯಗಳು ಇಲ್ಲದಿದ್ದರೂ ಹಝ್ರತ್ ಮಸೀಹ್ ಮೌಊದ್(ಅ)ರ ಸಂದೇಶ ಯೂರೋಪ್, ಅಮೇರಿಕ ಮತ್ತು ಲೋಕದ ಅನೇಕ ದೇಶಗಳಿಗೆ ತಲುಪಿತು. ಮಾತ್ರವಲ್ಲ, ಡೋಯಿಗೆ ಸಂಬಂಧಿಸಿದ ವಾರ್ತೆ ಎಷ್ಟು ವೈಭವಶಾಲಿ ರೀತಿಯಲ್ಲಿ ತಲುಪಿತು ಎಂಬುದು ನಾವು ನೋಡುತ್ತಿದ್ದೇವೆ. ಹಝ್ರತ್ ಮಸೀಹ್ ಮೌಊದ್(ಅ)ರ ಮೂಲಕ ಅಲ್ಲಾಹನು ಬಿತ್ತಿದ ಇಸ್ಲಾಮಿನ ಪುನರುಜ್ಜೀವನದ ಬೀಜವು ವೈಭವಶಾಲಿಯಾಗಿ ಲೋಕದಲ್ಲಿ ಹರಡುತ್ತಲೂ ಬೆಳೆಯುತ್ತಲೂ ಹೋಗುತ್ತಿದೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಅನೇಕ ವಾಗ್ದಾನಗಳನ್ನು ಮಾಡಿರುವನು. ಅಲ್ಲಾಹನು ದಿವ್ಯವಾಣಿ ಮೂಲಕ ಅವರಿಗೆ ಹೀಗೆ ತಿಳಿಸಿದನು: ಅಲ್ಲಾಹನು ನಿನ್ನನ್ನು ಕೈಬಿಡಲಾರನು. ಅಲ್ಲಾಹನು ನಿನಗೆ ಅಸಾಧಾರಣವಾದ ಗೌರವವನ್ನು ನೀಡುವನು. ಜನರು ನಿನ್ನನ್ನು ರಕ್ಷಿಸಲಾರರು, ಆದರೆ ನಾನು ನಿನ್ನನ್ನು ರಕ್ಷಿಸುವೆನು. (ಇಝಾಲ ಔಹಾಮ್, ರೂಹಾನಿ ಖಝಾಇನ್, ಸಂಪುಟ–03, ಪುಟ–442)

ಹೀಗೆ ಅನೇಕ ವಾಗ್ದಾನಗಳನ್ನು ಅಲ್ಲಾಹನು ಅವರೊಂದಿಗೆ ಮಾಡಿರುವನು. ಅಲ್ಲಾಹನು ತನ್ನ ವಾಗ್ದಾನಗಳನ್ನು ಹೇಗೆ ಈಡೇರಿಸುತ್ತಾನೆ ಎಂಬುದಕ್ಕೆ ಜಮಾಅತಿನ 133 ವರ್ಷಗಳ ಚರಿತ್ರೆ ಸಾಕ್ಷಿಯಾಗಿದೆ. ಈ ಸತ್ಯ ಸಂದೇಶವನ್ನು ತಲುಪಿಸಲು ಬೇಕಾದ ಏರ್ಪಾಡನ್ನು ಮಾಡಿರುವುದರಿಂದಲೇ ಇಂದು ಅಹ್ಮದಿಯಾ ಜಮಾಅತ್ ಲೋಕದ 220 ದೇಶಗಳಲ್ಲಿ ಹರಡಿದೆ. ಇಂದು ಲೋಕವು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ)ರನ್ನು ವಾಗ್ದತ್ತ ಮಹ್‌ದಿ ಮಸೀಹ್ ಆಗಿ ನಂಬುತ್ತಿದೆ. ಪ್ರತಿಯೊಂದು ವಿರೋಧಿಯನ್ನು ತನ್ನ ಮುಂದೆ ಬರಲು ಅವರು ಆಹ್ವಾನ ನೀಡಿದ್ದರು. ಪರಾರಿಯಾಗುವುದಲ್ಲದೇ ಶತ್ರುಗಳಿಗೆ ಬೇರೆ ಮಾರ್ಗವಿರಲಿಲ್ಲ. ಅಲ್ಲದವರನ್ನು ಅಲ್ಲಾಹನು ನಾಶಮಾಡಿದನು. ಪ್ರವಾದಿಗಳ ಜಮಾಅತಿನೊಂದಿಗೆ ವಿರೋಧ ಜಾರಿಯಲ್ಲಿರುತ್ತದೆ ಎಂಬುದು ಒಂದು ಸತ್ಯವಾಗಿದೆ. ಆದರೆ ವಿರೋಧಿಗಳು ಬಯಸಿದ್ದು ಅವರಿಗೆ ಲಭಿಸದು.

ಇದೇ ಅಹ್ಮದಿಯಾ ಜಮಾಅತಿನೊಂದಿಗೂ ನಡೆಯುತ್ತಿದೆ. ಅಹ್ಮದಿಯಾ ಜಮಾಅತನ್ನು ನಾಶ ಮಾಡಲು ಎಲ್ಲ ಮಾರ್ಗಗಳಿಂದಲೂ ಪೂರ್ತಿ ಶಕ್ತಿಯಿಂದಲೂ ಎಷ್ಟೆಲ್ಲ ಪ್ರಯತ್ನಗಳನ್ನು ಶತ್ರುಗಳು ಮಾಡಿದ್ದರು. ಈಗಲೂ ಮಾಡುತ್ತಿದ್ದಾರೆ. ದುರ್ಬಲ ವಿಶ್ವಾಸಿಗಳು ಇದರಿಂದ ಎಡವಿ ಕೂಡ ಬೀಳುತ್ತಾರೆ. ಆದರೆ ಒಬ್ಬರು ಹೋದರೆ ಸಾವಿರಾರು ಜನರನ್ನು ಅಲ್ಲಾಹನು ನೀಡುತ್ತಾನೆ.

ಆದ್ದರಿಂದ ನಾವು ಪ್ರಾಮಾಣಿಕರಾಗಿದ್ದೇವೆ ಎಂದು ವಾದಿಸುವವರಾದರೆ, ಹಝ್ರತ್ ಪೈಗಂಬರ್(ಸ) ಭವಿಷ್ಯ ನುಡಿದಿದ್ದ ವಾಗ್ದತ್ತ ಮಹ್‌ದಿ ಮಸೀಹ್ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ) ಆಗಿರುವರು ಎಂದು ನಾವು ಘೋಷಿಸುವವರಾದರೆ, ನಾವು ನಮ್ಮ ಎಲ್ಲ ಸಾಮರ್ಥ್ಯಗಳೊಂದಿಗೆ ಈ ಮಸೀಹ್ ಮತ್ತು ಮಹ್‌ದಿಯ ಸಹಾಯಕರಾಗಬೇಕಾಗಿದೆ. ಸಹಾಬಿಯರು ತೋರಿಸಿದಂತಹ ಮಾದರಿಯನ್ನು ನಾವು ತೋರಿಸಬೇಕಾಗುವುದು.

ನಾವು ಮುಸ್ಲಿಮರನ್ನು ಕೂಡ ಏಕಧರ್ಮದಲ್ಲಿ ಒಟ್ಟುಸೇರಿಸಿ ಅವರೊಳಗಿನಿಂದ ಎಲ್ಲ ನವೀನಾಚಾರಗಳನ್ನು ಕೊನೆಗೊಳಿಸಬೇಕಾಗಿದೆ. ಮುಸ್ಲಿಮೇತರರಿಗೂ ಇಸ್ಲಾಮಿನ ಸುಂದರ ಅಧ್ಯಾಪನೆಗಳನ್ನು ಪರಿಚಯಪಡಿಸಿ ಅವರನ್ನು ಏಕದೇವನ ಆರಾಧನೆ ಮಾಡುವವರನ್ನಾಗಿಯೂ ಹಝ್ರತ್ ಪೈಗಂಬರ್(ಸ)ರ ಮೇಲೆ ದುರೂದ್ ಕಳುಹಿಸುವವರನ್ನಾಗಿಯೂ ಮಾಡಬೇಕಾಗಿದೆ. ಆಗಲೇ ನಾವು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಮಾಡಿದ ಬೈಅತ್ತಿನ ಕರ್ತವ್ಯಗಳನ್ನು ಪಾಲಿಸುವವರಾಗುವೆವು. ಇಲ್ಲದಿದ್ದರೆ ನಮ್ಮ ಬೈಅತಿನ ವಾದಗಳು ಪೊಳ್ಳು ಮತ್ತು ಅರ್ಥಶೂನ್ಯವಾಗಿರುವುದು. ಅದನ್ನು ಗಳಿಸಲಿಕ್ಕಾಗಿ ನಾವು ನಮ್ಮ ಆರಾಧನೆಯ ಮಟ್ಟವನ್ನು ಉನ್ನತಗೊಳಿಸಬೇಕಾಗುವುದು. ಇಲ್ಲದಿದ್ದರೆ, ಮಸೀದಿಗಳನ್ನು ನಿರ್ಮಿಸುವುದರಲ್ಲಿ ಅರ್ಥವಿಲ್ಲ. ನಾವು ನಮ್ಮ ಜೀವಿತೋದ್ದೇಶವನ್ನು ತಲುಪುವಾಗಲೇ ಅದು ಸಾಧ್ಯವಾಗುವುದು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮನುಷ್ಯನು ತನ್ನ ಜೀವಿತೋದ್ದೇಶವನ್ನು ಸ್ವತಃ ನಿರ್ಣಯಿಸಲು ಸಾಧ್ಯವಲ್ಲ. ಮನುಷ್ಯನನ್ನು ಸೃಷ್ಟಿಸಿದ್ದು ಅಲ್ಲಾಹನಾಗಿದ್ದಾನೆ. ನಾನು ಮನುಷ್ಯನನ್ನು ಆರಾಧನೆಗಾಗಿ ಸೃಷ್ಟಿಸಿರುವೆನು ಎಂದು ಅಲ್ಲಾಹನು ಹೇಳುತ್ತಾನೆ.

ಈ ವಚನವನ್ನು ಹಝ್ರತ್ ಮಸೀಹ್ ಮೌಊದ್(ಅ) ಅನೇಕ ಕಡೆಗಳಲ್ಲಿ ವಿವರಿಸಿರುವರು. ಒಂದೆಡೆ ಅವರು ಹೀಗೆ ವಿವರಿಸಿರುವರು: ಮನುಷ್ಯನು ತನ್ನ ಪ್ರಭುವನ್ನು ಅರಿಯಬೇಕು ಮತ್ತು ತನ್ನ ಪ್ರಭುವಿಗೆ ವಿಧೇಯನಾಗಬೇಕು ಎಂಬುದಾಗಿದೆ ಮನುಷ್ಯ ಸೃಷ್ಟಿಯ ಯಥಾರ್ಥ ಉದ್ದೇಶ. **ವಮಾ ಖಲಕ್‌ತುಲ್ ಜಿನ್ನ ವಲ್ ಇನ್ಸ ಇಲ್ಲಾ ಲಿಯಅ್‌ಬುದೂನ್** ಎಂದರೆ, ನನ್ನನ್ನು ಆರಾಧನೆ ಮಾಡಲಿಕ್ಕಾಗಿ ನಾನು ಜಿನ್ನ್ ಮತ್ತು ಮನುಷ್ಯರನ್ನು ಸೃಷ್ಟಿಸಿದ್ದೇನೆ. ಆದರೆ ದುಃಖಕರವಾದ ಸಂಗತಿಯೇನೆಂದರೆ, ಬಹುತೇಕ ಜನರು ಲೋಕಕ್ಕೆ ಬರುತ್ತಾರೆ, ಪ್ರೌಢರಾದ ನಂತರ ತಮ್ಮ ಕರ್ತವ್ಯಗಳನ್ನು ಅರಿಯುವ ಬದಲಾಗಿ, ತಮ್ಮ ಜೀವಿತೋದ್ದೇಶವನ್ನು ಮುಂದಿರಿಸುವುದಕ್ಕೆ ಬದಲಾಗಿ ಅಲ್ಲಾಹನನ್ನು ಬಿಟ್ಟು ಲೋಕದ ಕಡೆಗೆ ವಾಲುತ್ತಾರೆ. ಲೋಕದ ಸಂಪತ್ತು ಮತ್ತು ಗೌರವಗಳಿಗೆ ಎಷ್ಟು ಮಾರುಹೋಗುತ್ತಾರೆ ಎಂದರೆ, ಅಲ್ಲಾಹನಿಗೆ ಬಹಳ ಅಲ್ಪ ಸ್ಥಾನವನ್ನು ನೀಡುತ್ತಾರೆ. ಕೆಲವರ ಹೃದಯಗಳಲ್ಲಿ ದೇವನು ಇರುವುದೇ ಇಲ್ಲ. ಅವರು ಲೋಕದಲ್ಲೇ ಮಗ್ನರೂ ತಲ್ಲೀನರೂ ಆಗುತ್ತಾರೆ. ದೇವನೊಬ್ಬನಿದ್ದಾನೆ ಎಂಬ ವಿಷಯವೇ ಅವರಿಗೆ ಗೊತ್ತಿರುವುದಿಲ್ಲ. ಆತ್ಮವನ್ನು ತೆಗೆಯುವ ದೇವದೂತರು ಬರುವಾಗಲೇ ಅವರಿಗೆ ಗೊತ್ತಾಗುತ್ತದೆ ಅಷ್ಟೆ. (ಮಲ್‌ಫೂಝಾತ್, ಸಂಪುಟ–7, ಪುಟ–177–178, ಮುದ್ರಿತ 1984) ಮರಣ ಸಮಯದಲ್ಲಿ ಗೊತ್ತಾಗಿಬಿಡುತ್ತದೆ. ಕಾಲಘಟ್ಟದ ಇಮಾಮರನ್ನು ನಂಬುತ್ತೇವೆ ಎಂದು ವಾದಿಸುವ ನಮ್ಮ ಜೀವಿತ ಹೀಗೆ ಕಳೆಯಬಾರದು. ನಾವಂತು ಜೀವಿತದ ಉದ್ದೇಶವನ್ನು ಅರಿಯುವ ಪ್ರಯತ್ನವನ್ನು ಮಾಡುತ್ತಾ ಆರಾಧನೆಯ ಕರ್ತವ್ಯವನ್ನು ಈಡೇರಿಸಬೇಕು. ನಾವು ನಮ್ಮ ಪ್ರಯತ್ನಗಳನ್ನು ಅಲ್ಲಾಹನ ಸಹಾಯದಿಂದ ಗಳಿಸಲು ಪ್ರಯತ್ನಿಸುವಾಗಲೇ ಈ ಸುಂದರವಾದ ಮಸೀದಿಯ ಕಡೆಗೆ ಜನರ ಗಮನ ಉಂಟಾಗುವುದು, ಆಗಲೇ ನಾವು ಇಸ್ಲಾಮಿನ ಸಂದೇಶವನ್ನು ನೈಜವಾದ ರೀತಿಯಲ್ಲಿ ಮುಂದಕ್ಕೆ ತಲುಪಿಸಲು ಸಾಧ್ಯ. ಆಗಲೇ ನಾವು ಹಝ್ರತ್ ಮಸೀಹ್ ಮೌಊದ್(ಅ)ರ ದೌತ್ಯವನ್ನು, ಕೆಲಸವನ್ನು ಈಡೇರಿಸಬಹುದಾಗಿದೆ. ನಾವು ನಮ್ಮ ಆರಾಧನೆಗಳ ಕರ್ತವ್ಯಗಳನ್ನು ಈಡೇರಿಸುವ ವರೆಗೂ ಅದು ಸಾಧ್ಯವಲ್ಲ. ಆದ್ದರಿಂದ ಅಲ್ಲಾಹನ ಅನುಗ್ರಹಗಳನ್ನು ಹೀರಿಕೊಳ್ಳುತ್ತಾ ತಮ್ಮ ಇಹಪರ ಜೀವಿತವನ್ನು ಸುಂದರಗೊಳಿಸಲಿಕ್ಕಾಗಿ ಅಲ್ಲಾಹನಿಗೆ ಸಲ್ಲಬೇಕಾದ ಆರಾಧನೆಯ ಕರ್ತವ್ಯಗಳನ್ನು ಈಡೇರಿಸಬೇಕೆಂದು ಪ್ರತಿಯೊಬ್ಬ ಅಹ್ಮದಿಯು ಯೋಚಿಸಬೇಕು ಮತ್ತು ತನ್ನ ಜೀವಿತದ ಭಾಗವನ್ನಾಗಿ ಮಾಡಬೇಕು.

ನಾವು ನಮ್ಮ ಜೀವಿತದ ಉದ್ದೇಶವನ್ನು ಮನವರಿಕೆ ಮಾಡುವಾಗಲೇ ಇಂದಿನ ಈ ಮಸೀದಿಯ ಉದ್ಘಾಟನೆ ಮಹೋನ್ನತವಾಗುವುದು. ಲೋಕದಲ್ಲಿ ಅನೇಕ ಸುಂದರ ಮತ್ತು ಬಹಳ ದೊಡ್ಡದಾದ ಮಸೀದಿಗಳ ಕೊರತೆಯೇನೂ ಇಲ್ಲ. ಆದರೆ ಅಲ್ಲಿಗೆ ಬರುವವರು ತಮ್ಮ ಹುಟ್ಟಿನ ಉದ್ದೇಶವನ್ನು ಈಡೇರಿಸುತ್ತಿಲ್ಲ. ಬೇಗ ಬೇಗನೇ ಐದು ಹೊತ್ತಿನ ನಮಾಝ್‌ಗಳನ್ನು ಮಾತ್ರ ಅಥವಾ ಕೆಲವು ನಮಾಝ್‌ಗಳನ್ನು ಕೋಳಿ ಕುಕ್ಕುವ ಹಾಗೆ ನಿರ್ವಹಿಸುವುದು ಆರಾಧನೆಯಲ್ಲ. ಬದಲಾಗಿ ಆರಾಧನೆ ಎಂದರೆ, ನಮಾಝನ್ನು ನಿರ್ವಹಿಸಬೇಕಾದ ರೀತಿಯಲ್ಲಿ ನಿರ್ವಹಿಸುವುದಾಗಿದೆ. ಅದನ್ನು ಉತ್ತಮವಾಗಿ ನಿರ್ವಹಿಸುವುದಾಗಿದೆ. ಒಬ್ಬ

ವ್ಯಕ್ತಿಯೊಡನೆ ಹಝ್ರತ್ ಪೈಗಂಬರ್(ಸ) ಮೂರ್‍ನಾಲ್ಕು ಬಾರಿ ಪುನಃ ನಮಾಝನ್ನು ಅನುಷ್ಠಿಸಲು ಹೇಳಿದ್ದು ಏಕೆಂದರೆ, ಅವನು ನಮಾಝನ್ನು ನಿರ್ವಹಿಸಬೇಕಾದ ರೀತಿಯಲ್ಲಿ ನಿರ್ವಹಿಸುತ್ತಿರಲಿಲ್ಲ. ಸಮಾಧಾನದಿಂದ ಉತ್ತಮ ರೀತಿಯಲ್ಲಿ ಅವನು ನಮಾಝ್ ಮಾಡುತ್ತಿರಲಿಲ್ಲ.
(ಸಹೀಹ್ ಬುಖಾರಿ, ಕಿತಾಬುಲ್ ಅಝಾನ್, ಹದೀಸ್–757)

ಆದ್ದರಿಂದ ನಮಾಝ್‌ಗಳನ್ನು ಕೂಡ ಸರಿಯಾಗಿ ನಿರ್ವಹಿಸಿರಿ. ಆಗಲೇ ನಮಗೆ ಅಲ್ಲಾಹನ ಸಾಮೀಪ್ಯ ಲಭಿಸುವುದು. ಅಲ್ಲಾಹನ ದಾಸರಿಗೆ ಸಲ್ಲಬೇಕಾದ ಹಕ್ಕುಗಳನ್ನು ಕೂಡ ಈಡೇರಿಸುವಾಗಲೇ ಆರಾಧನೆಗಳು ಸ್ವೀಕಾರಗೊಳ್ಳುತ್ತವೆ. ಇತರರ ಹಕ್ಕುಗಳನ್ನು ದೋಚುವವನ ನಮಾಝ್‌ಗಳು ಅವನ ನಾಶಕ್ಕೆ ಕಾರಣವಾಗುವುವು. ಅಂಥವನ ನಮಾಝ್‌ಗಳನ್ನು ಅವನ ಮುಖಕ್ಕೆ ಎಸೆಯಲಾಗುವುದು. ಆದ್ದರಿಂದ ಅಲ್ಲಾಹನ ಆದೇಶಗಳನ್ನು ಪಾಲಿಸುತ್ತಾ ಮತ್ತು ಅವನ ಸಂಪ್ರೀತಿಯನ್ನು ಗಳಿಸುತ್ತಾ ಮಸೀದಿಗಳನ್ನು ಆರಾಧನೆ ಮಾಡುವವರಿಂದ ತುಂಬಿಸುವುದು ನಮ್ಮ ಉದ್ದೇಶವಾಗಿರಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಪಂಥಾಹ್ವಾನ ನೀಡಿದ ವ್ಯಕ್ತಿಯು ಏನನ್ನು ಬಯಸುತ್ತಿದ್ದನು? ಅವನು ಧರ್ಮದ ಹೆಸರಲ್ಲಿ ಲೋಕದಲ್ಲಿ ತನ್ನ ಆಡಳಿತ ನಡೆಯಬೇಕು ಎಂದು ಬಯಸುತ್ತಿದ್ದನು. ಅದಕ್ಕಾಗಿ ಅವನು ಮಸೀಹ್ ಮೌಊದ್(ಅ)ರ ಹೆಸರನ್ನು ಉಪಯೋಗಿಸಿದನು. ಮುಹಮ್ಮದೀ ಮಸೀಹ್‌ರನ್ನು ಹಾಗೆ ಮಾಡುವೆನು, ಹೀಗೆ ಮಾಡುವೆನು ಎಂದು ದೊಡ್ಡ ದೊಡ್ಡ ವಾದವನ್ನು ಮಾಡಿದನು. ಅದರ ಕುರಿತು ನಾನು ಒಂದು ವಾರ್ತಾಪತ್ರಿಕೆಯ ಒಂದು ಉಲ್ಲೇಖವನ್ನು ನಿಮ್ಮ ಮುಂದಿರಿಸಿದ್ದೆ. ಹಝ್ರತ್ ಮಸೀಹ್ ಮೌಊದ್(ಅ) ದುಆದ ಚಾಲೇಂಜ್ ನೀಡಿದ್ದಾಗ ಅವನ ಕೊನೆಯು ಪ್ರಕಟಗೊಂಡಿತು. ಲೋಕವು ಎಲ್ಲ ರೀತಿಯಲ್ಲೂ ಡೋಯಿಯ ನಿಂದೆ ಮತ್ತು ಅಪಮಾನವನ್ನು ನೋಡಿತು. ಎಷ್ಟು ಸ್ಪಷ್ಟವಾದ ದೃಷ್ಟಾಂತ ಪ್ರಕಟಗೊಂಡಿತು ಎಂದರೆ ವಾರ್ತಾಪತ್ರಿಕೆಗಳಿಗೂ ಒಪ್ಪಬೇಕಾಗಿ ಬಂತು. ಏಕೆಂದರೆ, ಅದಲ್ಲದೇ ಅವರಿಗೆ ಬೇರೆ ಮಾರ್ಗವಿರಲಿಲ್ಲ. ಮಿರ್ಝಾ ಗ್ಹುಲಾಂ ಅಹ್ಮದ್(ಅ)ರನ್ನು ಮಹಾನ್ ಎಂದು ಹೇಳದೇ ಇರಲು ನಿರ್ವಾಹವಿರಲಿಲ್ಲ. ಆದರೆ ಈ ಹಿರಿದಾದ ಸಂತೋಷದಲ್ಲಿ ನಾವು ನೆನಪಿಗಾಗಿ ಕೇವಲ ಒಂದು ಮಸೀದಿಯನ್ನು ನಿರ್ಮಿಸಿ ಸಂತೋಷಗೊಂಡರೆ ಸಾಕೇ? ನಾನು ಹೇಳಿದಂತೆ ನಾವು ಹಝ್ರತ್ ಮಸೀಹ್ ಮೌಊದ್(ಅ) ಮಾಡಿದ ದುಆಗಳ ಫಲಗಳನ್ನು ಸೇವಿಸಿದೆವು ಮತ್ತು ಸೇವಿಸುತ್ತಿದ್ದೇವೆ. ಆದರೆ ಅಲ್ಲಾಹನೊಂದಿಗೆ ಸಂಬಂಧವಿರಿಸುವ ಮಾರ್ಗಗಳಲ್ಲಿ ನಡೆಯಲು ಹಝ್ರತ್ ಮಸೀಹ್ ಮೌಊದ್(ಅ) ತನ್ನನ್ನು ನಂಬಿದವರನ್ನು ಉಪದೇಶಿಸಿದ್ದರು. ನಾಶವನ್ನು ಮಾಡಲು ಮಾತ್ರ ಹಝ್ರತ್ ಮಸೀಹ್ ಮೌಊದ್(ಅ) ಚಾಲೇಂಜ್ ನೀಡಿರಲಿಲ್ಲ. ಬದಲಾಗಿ ಇಸ್ಲಾಮಿನ ವೈಭವವನ್ನು ಸ್ಥಾಪಿಸಲು ಮತ್ತು ಲೋಕವನ್ನು ಇಸ್ಲಾಮಿನ ಧ್ವಜದಡಿಯಲ್ಲಿ ತರಲಿಕ್ಕಾಗಿ ಪಂಥಾಹ್ವಾನವನ್ನು ನೀಡಿದ್ದರು. ಮುಹಮ್ಮದೀ ಮಸೀಹರು ಹಝ್ರತ್ ಪೈಗಂಬರ್(ಸ)ರ ಧ್ವಜವನ್ನು ಎತ್ತಿಹಿಡಿಯುತ್ತಾ ಏಕದೇವನ ಆಡಳಿತವನ್ನು ಸ್ಥಾಪಿಸಬೇಕಾಗಿದೆ.

ಆದ್ದರಿಂದ ಮುಹಮ್ಮದೀ ಮಸೀಹ್‌ರ ಕೆಲಸಗಳನ್ನು ದೇಶಗಳ ಮೂಲೆಮೂಲೆಗೂ ಹರಡುವುದು ಮತ್ತು ಏಕದೇವ ವಿಶ್ವಾಸವನ್ನು ಸಾಬೀತುಪಡಿಸುವುದು ಹಝ್ರತ್ ಮಸೀಹ್ ಮೌಊದ್(ಅ)ರ ಜಮಾಅತಿನಲ್ಲಿ ಸೇರಿದವರು ಎಂದು ವಾದಿಸುವವರ ಕರ್ತವ್ಯವಾಗಿದೆ. ನಾವು ನಮ್ಮ ಸಂಬಂಧವನ್ನು ಅಲ್ಲಾಹನೊಂದಿಗೆ ಇರಿಸುವಾಗಲೇ ಮತ್ತು ದೇವಭಕ್ತಿಯನ್ನು ವರ್ಧಿಸುವಾಗಲೇ ಈ ಕೆಲಸ ನಡೆಯುವುದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಮ್ಮ ಜಮಾಅತಿನವರಿಗೆ ವಿಶಿಷ್ಟವಾದ ದೇವಭಕ್ತಿಯ ಆವಶ್ಯಕತೆಯಿದೆ. ತಾನು ಅಲ್ಲಾಹನಿಂದ ಕಳುಹಿಸಿದ ವ್ಯಕ್ತಿಯಾಗಿದ್ದೇನೆ ಎಂದು ವಾದಿಸುವ ಒಬ್ಬರ ಜೊತೆಗೆ ಸಂಬಂಧವಿರಿಸಿರುವ ಕಾರಣದಿಂದ ವಿಶೇಷವಾಗಿ ಇದರ ಆವಶ್ಯಕತೆಯಿದೆ. ಹೀಗಾದರೆ, ಎಂತಹದ್ದೇ ರೀತಿಯ ಹಗೆ, ದ್ವೇಷಗಳು, ಶಿರ್ಕ್ ಅಥವಾ ಲೌಕಿಕತೆಯಲ್ಲಿ ಮುಳುಗಿರುವ ಜನರು ಕೂಡ ಈ ಎಲ್ಲ ವಿಪತ್ತುಗಳಿಂದ ಮುಕ್ತರಾಗುವರು. (ಮಲ್‌ಫೂಝಾತ್, ಸಂಪುಟ–1, ಪುಟ–10, ಮುದ್ರಿತ 1984)

ಆದ್ದರಿಂದ ತಮ್ಮ ಆಂತರಿಕ ಶುದ್ಧಿ ಮಾಡುವುದು ಕೂಡ ಬಹಳ ಮುಖ್ಯ. ಈ ಆಂತರಿಕ ಶುದ್ಧಿ ಮತ್ತು ದೇವಭಕ್ತಿ ಉಂಟಾದರೆ, ದೃಷ್ಟಾಂತಗಳ ನಂತರ ಇನ್ನಷ್ಟು ದೃಷ್ಟಾಂತಗಳು ಪ್ರಕಟವಾಗುತ್ತಿರುವುದಾಗಿ ಲೋಕವು ಕಾಣುವುದು. ಈ ಮಟ್ಟವನ್ನು ತಲುಪುವಾಗ ವಿಜಯಗಳ ಇನ್ನಷ್ಟು ಮಾರ್ಗಗಳು ತೆರೆಯುತ್ತಾ ಹೋಗುವುವು. ಇನ್‌ಶಾ ಅಲ್ಲಾಹ್. ಇಂತಹ ಸ್ಥಿತಿಯಲ್ಲೇ ನಾವು ಮಹಾ ವಿಜಯದ ನೈಜತೆಯನ್ನು ನೋಡುವೆವು. ಆದ್ದರಿಂದ ಎಲ್ಲೈ ಮುಹಮ್ಮದೀ ಮಸೀಹ್‌ರ ದಾಸರೇ, ಪ್ರತಿಯೊಂದು ವಿಜಯದ ದೃಷ್ಟಾಂತವು ನಮ್ಮೊಳಗೆ ಒಂದು ಬದಲಾವಣೆಯನ್ನು ಉಂಟುಮಾಡುವುದಾಗಿರಬೇಕು.

ಇಂದಿನ ದಿನವು ನಮ್ಮಲ್ಲಿ, ನಮ್ಮ ಮಕ್ಕಳಲ್ಲಿ ಮತ್ತು ನಮ್ಮ ಸಂತಾನಗಳಲ್ಲಿ ಆಧ್ಯಾತ್ಮಿಕ ಬದಲಾವಣೆ ತರುವ ದಿನವಾಗುವುದು ಮತ್ತು ಆಗಬೇಕು ಎಂದು ಪ್ರತಿಜ್ಞೆ ಮಾಡಿರಿ. ಇಲ್ಲದಿದ್ದರೆ ಡೋಯಿಯ ನಾಶ ಅಥವಾ ಈ ಪಟ್ಟಣದ ಜನರಿಗೆ ಅವನ ಪರಿಚಯವಿಲ್ಲದಂತಹ ಸ್ಥಿತಿಯಲ್ಲಿ ಅವನ ಬಗ್ಗೆ ನಾವು ಅವರಿಗೆ ಪರಿಚಯಿಸಿ ಕೊಟ್ಟೆವು ಎಂಬುವುದರಿಂದ ನಮಗೆ ಲಭಿಸುವ ಪ್ರಯೋಜನವಾದರೂ ಏನು? ಈ ಮಹತ್ತಾದ ವಿಜಯದ ಭವಿಷ್ಯವಾಣಿಯಿಂದ ನಮ್ಮೊಳಗೂ ಒಂದು ಮಹೋನ್ನತವಾದ ಬದಲಾವಣೆ ನಾವು ಉಂಟುಮಾಡುವಾಗ, ನಮ್ಮ ದೇಶವಾಸಿಗಳೂ ಹಾಗೂ ಲೋಕದೆಲ್ಲರೂ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದಾಸ್ಯವನ್ನು ಸ್ವೀಕಾರ ಮಾಡುವಾಗ, ಏಕದೇವವಿಶ್ವಾಸವನ್ನು ಒಪ್ಪಿಕೊಳ್ಳುವಾಗ ಮತ್ತು ಅದಕ್ಕಾಗಿ ಎಲ್ಲ ರೀತಿಯ ತ್ಯಾಗಗಳಿಗಾಗಿ ತಯಾರಾಗುವಾಗ ಮಾತ್ರವೇ ಪ್ರಯೋಜನ ಉಂಟಾಗುವುದು. ಅಲ್ಲಾಹನು ನಮಗೂ ನಮ್ಮ ಸಂತಾನಗಳಿಗೂ ಈ ಪದವಿಯನ್ನು ಗಳಿಸಲು ಸೌಭಾಗ್ಯ ನೀಡಲಿ.

ಈ ಮಸೀದಿಯ ಬಗ್ಗೆ ವಿಶದವಿವರಣೆಗಳನ್ನು ಬರೆದು ಕೊಡಲಾಗಿತ್ತು. ಆದರೆ ಅದನ್ನು ನಿಮಗೆ ನಂತರ ತಿಳಿಸಲಾಗುವುದು. ಕೆಲವನ್ನು ನಾನು ಹೇಳಿಯಾಗಿದೆ.

***********

### *ಕವನ "ಮಹ್‌ಮೂದ್ ಕೀ ಆಮೀನ್"*

(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

ಹಮ್‌ದೋ ಸನಾ ಉಸೀ ಕೋ ಜೋ ಝಾತ್ ಜಾವಿದಾನೀ
ಹಮ್‌ಸರ್ ನಹೀ ಹೇ ಉಸ್‌ಕಾ ಕೋಯೀ ನ ಕೋಯೀ ಸಾನೀ
**ಅರ್ಥ**: ಎಲ್ಲ ಸ್ತುತಿಗಳು ಶಾಶ್ವತವಾದ ಅಸ್ತಿತ್ವವುಳ್ಳವನಿಗೆ ಸಲ್ಲುತ್ತವೆ.
ಅವನಿಗೆ ಸಮಾನರು ಯಾರೂ ಇಲ್ಲ; ಸರಿಸಾಟಿಗಳೂ ಇಲ್ಲ.

ಬಾಖೀ ವಹೀ ಹಮೇಶ ಗ್ಹೈರ್ ಉಸ್‌ಕೇ ಸಬ್ ಹೈಂ ಫಾನೀ
ಗ್ಹೈರೋಂ ಸೇ ದಿಲ್ ಲಗಾನ ಝೂಟೀ ಹೇ ಸಬ್ ಕಹಾನೀ
**ಅರ್ಥ:** ಅವನೇ ಸದಾಕಾಲ ನಾಶವಾಗದೆ ಉಳಿಯುವವನು.
ಅವನ ಹೊರತು ಎಲ್ಲರೂ ನಶ್ವರರು.
ಅನ್ಯರೊಂದಿಗೆ ಹೃದಯಬಂಧ ಸ್ಥಾಪಿಸುವುದು
ಸುಳ್ಳು ಕತೆಯ ಹಾಗೆ ನಿರರ್ಥಕ.

ಸಬ್ ಗ್ಹೈರ್ ಹೈಂ ವಹೀ ಹೇ ಇಕ್ ದಿಲ್ ಕಾ ಯಾರೆ ಜಾನೀ
ದಿಲ್ ಮೇ ಮೆರೆ ಯಹೀ ಹೇ ಸುಬ್‌ಹಾನ ಮೈಯ್ಯರಾನೀ
**ಅರ್ಥ:** ಅವನೊಬ್ಬನೇ ನನ್ನ ಪ್ರಾಣಮಿತ್ರ.
ಉಳಿದವರೆಲ್ಲರೂ ನನಗೆ ಅನ್ಯರು
ನನ್ನ ಹೃದಯದಲ್ಲಿ ಇದು ಮಾತ್ರವಿದೆ.
ನನ್ನನ್ನು ವೀಕ್ಷಿಸುವವನು ಪರಿಶುದ್ಧನು.

ಸಬ್ ಕಾ ವಹೀ ಸಹಾರಾ ರಹ್ಮತ್ ಹೇ ಆಶ್‌ಕಾರಾ
ಹಮ್ ಕೋ ವಹೀ ಪ್ಯಾರಾ ದಿಲ್‌ಬರ್ ವಹೀ ಹಮಾರಾ
**ಅರ್ಥ:** ಎಲ್ಲರಿಗೂ ಅವನೇ ಆಶ್ರಯದಾತನಾಗಿರುವನು –
ಅವನ ಕೃಪೆ ಬಹಿರಂಗವಾಗಿದೆ.
ಅವನು ನಮಗೆ ಅತ್ಯಂತ ಪ್ರಿಯಕರ,
ನಮ್ಮ ಹೃದಯಗಳಲ್ಲಿ ಅವನೇ ಇರುವನು.

ಉಸ್‌ಬಿನ್ ನಹೀ ಗುಝಾರಾ, ಗ್ಹೈರ್ ಉಸ್‌ಕೇ ಝೂಟ್ ಸಾರಾ
ಯೆಃ ರೋಝ್ ಕರ್ ಮುಬಾರಕ್ ಸುಬ್‌ಹಾನ ಮಯ್ಯರಾನೀ
**ಅರ್ಥ:** ಅವನ ಹೊರತು ನಾವು ಜೀವಿಸಲಾರೆವು;
ಅವನ ಹೊರತು ಎಲ್ಲವೂ ಮಿಥ್ಯ
ಈ ದಿನವನ್ನು ಅನುಗ್ರಹೀತವನ್ನಾಗಿ ಮಾಡು –
ನನ್ನನ್ನು ವೀಕ್ಷಿಸುವವನು ಪರಿಶುದ್ಧನು.
***(ಮಹ್‌ಮೂದ್ ಕೀ ಆಮೀನ್; ರೂಹಾನೀ ಖಝಾಇನ್ ಸಂಪುಟ 12, ಪುಟ 319)***

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**
**Love for All, Hatred for None**
**MUSLIM TELEVISION AHMADIYYA INTERNATIONAL**
**www.mta.tv**

# ಖುತ್‌ಬ ಜುಮುಅ

ಈಗ ನಮ್ಮ ಜಮಾಅತಿಗೆ ಮಸೀದಿಗಳ ಬಹಳ ಆವಶ್ಯಕತೆಯಿದೆ. ಇದು ಅಲ್ಲಾಹನ ಭವನವಾಗಿದೆ. ಯಾವ ಗ್ರಾಮ ಅಥವಾ ಪಟ್ಟಣದಲ್ಲಿ ಮಸೀದಿಯ ನಿರ್ಮಾಣವಾಗುತ್ತದೋ ಅಲ್ಲಿ ಇಸ್ಲಾಮಿನ ಬುನಾದಿ ಹಾಕಿದಂತೆ. ಆದರೆ ಮಸೀದಿಯ ನಿರ್ಮಾಣದಲ್ಲಿ ನಿಷ್ಠೆಯಿರಬೇಕು. ಅಲ್ಲಾಹನಿಗಾಗಿ ಮಾಡಿರಬೇಕು ಎಂಬುದಾಗಿದೆ ಇದಕ್ಕಿರುವ ನಿಬಂಧನೆ."

ಯಾವನು ಅಲ್ಲಾಹನ ಸಂಪ್ರೀತಿಗಾಗಿ ಮಸೀದಿ ನಿರ್ಮಾಣ ಮಾಡುತ್ತಾನೋ ಅವನಿಗಾಗಿ ಅಲ್ಲಾಹನು ಸ್ವರ್ಗದಲ್ಲಿ ಅಂತಹದ್ದೇ ಮನೆಯನ್ನು ಮಾಡುವನು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಅದರಂತೆ ನೀವು ಅನುಗ್ರಹ ಪಡೆಯುವಂತೆ ಅಲ್ಲಾಹನು ಮಾಡಲಿ.

ಅಲ್ಲಾಹನ ಆಜ್ಞೆಗಳ ಪ್ರಕಾರ ನಡೆಯುವಾಗ, ಅವನ ಆರಾಧನೆಯ ಕರ್ತವ್ಯವನ್ನು ನಿರ್ವಹಿಸುವಾಗ, ಅವನ ಸೃಷ್ಟಿಗಳಿಗೆ ಸಂಬಂಧಿಸಿದ ಹಕ್ಕುಗಳನ್ನು ನಿರ್ವಹಿಸುವಾಗ, ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಧರ್ಮಕ್ಕೆ ಲೌಕಿಕತೆಯ ಮೇಲೆ ಆದ್ಯತೆ ನೀಡುವಾಗ ಮತ್ತು ತನ್ನ ಬೈಅತಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸುವಾಗಲೇ ಮನುಷ್ಯನು ಅಲ್ಲಾಹನ ಸಂಪ್ರೀತಿಯನ್ನು ಗಳಿಸುತ್ತಾನೆ.

ಈ ಮಸೀದಿಯನ್ನು ಜನನಿಬಿಡಗೊಳಿಸುವುದು ನಮ್ಮ ಹೊಣೆಗಾರಿಕೆಯಾಗಿದೆ. ಪರಸ್ಪರ ಪ್ರೀತಿ - ಸ್ನೇಹದಿಂದ ಇರುವುದು ನಮ್ಮ ಜವಾಬ್ದಾರಿಯಾಗಿದೆ. ಸಹಿಷ್ಣುತೆ ಮತ್ತು ಸಹೋದರತೆಯ ಸಂದೇಶವನ್ನು ಲೋಕದಲ್ಲಿ ಹರಡುವುದು ನಮ್ಮ ಜವಾಬ್ದಾರಿಯಾಗಿದೆ. ಇಸ್ಲಾಮಿನ ಸುಂದರ ಪಾಠವನ್ನು ಲೋಕಕ್ಕೆ ನೀಡುವುದು ನಮ್ಮ ಕರ್ತವ್ಯವಾಗಿದೆ. ಸತತವಾದ ದುಆಗಳ ಮೂಲಕ ತಮ್ಮ ಸುಧಾರಣೆಯ ಕಡೆಗೆ ಗಮನಹರಿಸುವುದು ನಮ್ಮ ಹೊಣೆಗಾರಿಕೆಯಾಗಿದೆ. ತಮ್ಮ ಸಂತಾನಗಳ ಸುಧಾರಣೆಯ ಬಗ್ಗೆ ಚಿಂತಿಸುವುದು ನಮ್ಮ ಜವಾಬ್ದಾರಿಯಾಗಿದೆ. ಆಗಲೇ ನಾವು ಮಸೀದಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವವರಾಗುವೆವು.

ಇಸ್ಲಾಮಿನ ಈ ಸ್ಥಿತಿಯನ್ನು ಸುಧಾರಿಸಲಿಕ್ಕಾಗಿ ನಾವು ಅಲ್ಲಾಹನು ಕಳುಹಿಸಿದ ಪ್ರವಾದಿಯೊಂದಿಗೆ ಹೊಂದಿಕೊಂಡಿದ್ದೇವೆ. ಇಂದು ಅಲ್ಲಾಹನೊಂದಿಗೆ ಇರಿಸಬೇಕಾದ ನಿಷ್ಠೆಯ ಮಟ್ಟವನ್ನು ಸ್ಥಾಪಿಸಬೇಕಾದವರು ನಾವೇ ಆಗಿದ್ದೇವೆ. ಆದ್ದರಿಂದ ಪ್ರಾಮಾಣಿಕತೆ ಮತ್ತು ನಂಬಿಕೆಯಿಂದ ಅಲ್ಲಾಹನೊಂದಿಗೆ ಇರಿಸಬೇಕಾದ ನಿಷ್ಠೆಯನ್ನು ಇರಿಸಬೇಕಾಗಿದೆ. ನಾವು ಎಲ್ಲೆಡೆ ಪ್ರೀತಿಯನ್ನು ಹರಡಬೇಕು, ಹಗೆಯನ್ನು ದೂರಮಾಡಬೇಕು. ನಮಗೆ ಅಲ್ಲಾಹನ ಮೇಲೆ ಪರಿಪೂರ್ಣ ಭರವಸೆ ಇರಬೇಕು. ಏಕೆಂದರೆ, ಪ್ರತಿಯೊಂದು ಕೆಲಸವನ್ನು ಸರಿಪಡಿಸುವವನು ಅವನೇ ಆಗಿದ್ದಾನೆ. ಈಗ ಲೋಕದಲ್ಲಿ ಜಯಿಸುವ ಧರ್ಮ ಇಸ್ಲಾಮೇ ಆಗಿದೆ.

ನಾವು ಮಸೀದಿಗಳನ್ನು ತುಂಬಿಸುವ ಸತ್ಯವಿಶ್ವಾಸಿಗಳಾಗಬೇಕು. ಒಂದು ನಮಾಝಿನ ನಂತರ ಮತ್ತೊಂದು ನಮಾಝನ್ನು ನಿರ್ವಹಿಸುವ ಪ್ರತೀಕ್ಷೆಯಲ್ಲಿ ಇರುವುದು ಮಸೀದಿಯನ್ನು ತುಂಬಿಸುವವರ ಲಕ್ಷಣವಾಗಿದೆ.

**ಮಸ್ಜಿದ್ ಬೈತ್-ಉಲ್-ಇಕ್ರಾಮ್, ಡಲ್ಲಾಸ್‌ನ ಉದ್ಘಾಟನೆಯ ಸಂದರ್ಭದಲ್ಲಿ, ಜಮಾಅತ್ತಿನ ಸದಸ್ಯರು ಅಹ್ಮದಿ ಮುಸ್ಲಿಮರಾಗಿ ತಮ್ಮ ಜವಾಬ್ದಾರಿಗಳನ್ನು ಪೂರೈಸಲು ಬೋಧನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಎಸ್.ಎ ಟೆಕ್ಸಾಸ್, ಡಲ್ಲಾಸ್‌ನ **'ಮಸ್ಜಿದ್ ಬೈತುಲ್ ಇಕ್ರಾಮ್'** ನಿಂದ **07-10-2022** ರಂದು ನೀಡಿದ **ಖುತ್‌ಬ ಜುಮುಅ**

اَشْهَدُ اَنْ لَّا اِلٰهَ اِلَّا اللّٰهُ وَحْدَهٗ لَا شَرِيْكَ لَهٗ وَاَشْهَدُ اَنَّ مُحَمَّدًا عَبْدُهٗ وَرَسُوْلُهٗ

اَمَّا بَعْدُ فَاَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ -

اَلْحَمْدُ لِلّٰهِ رَبِّ الْعٰلَمِيْنَ ○ الرَّحْمٰنِ الرَّحِيْمِ ○ مٰلِكِ يَوْمِ الدِّيْنِ ○ اِيَّاكَ نَعْبُدُ وَاِيَّاكَ نَسْتَعِيْنُ ○

اِهْدِنَا الصِّرَاطَ الْمُسْتَقِيْمَ ○ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ○

قُلْ اَمَرَ رَبِّيْ بِالْقِسْطِ وَاَقِيْمُوْا وُجُوْهَكُمْ عِنْدَ كُلِّ مَسْجِدٍ وَّادْعُوْهُ مُخْلِصِيْنَ لَهُ الدِّيْنَ كَمَا بَدَاَكُمْ تَعُوْدُوْنَ ۝٣٠ فَرِيْقًا هَدٰى وَفَرِيْقًا حَقَّ عَلَيْهِمُ الضَّلٰلَةُ اِنَّهُمُ اتَّخَذُوا الشَّيٰطِيْنَ اَوْلِيَآءَ مِنْ دُوْنِ اللّٰهِ وَيَحْسَبُوْنَ اَنَّهُمْ مُّهْتَدُوْنَ ۝٣١ يٰبَنِيْٓ اٰدَمَ خُذُوْا زِيْنَتَكُمْ عِنْدَ كُلِّ مَسْجِدٍ وَّكُلُوْا وَاشْرَبُوْا وَلَا تُسْرِفُوْا اِنَّهٗ لَا يُحِبُّ الْمُسْرِفِيْنَ ۝٣٢ (الاعراف:30 تا 32)

**ಖುಲ್ ಅಮರ ರಬ್ಬಿ ಬಿಲ್ ಖಿಸ್ತಿ; ವ ಅಖೀಮು ವುಜೂಹಕುಮ್ ಇಂದ ಕುಲ್ಲಿ ಮಸ್ಜಿದಿವ್ವದ್‌ಊಹು ಮುಖ್ಲಿಸೀನ ಲಹುದ್ದೀ; ಕಮಾ ಬದಊಕುಮ್ ತಊದೂನ್. ಫ಼ರೀಖನ್ ಹಖ್ಖ ಅಲೈಹಿಮುಝ್ಝಲಾಲತು; ಇನ್ನಹುಮುತ್ತಖಝು ಶ್ಶಯಾತೀನ ಔಲಿಯಾಅ ಮಿನ್ ದೂನಿಲ್ಲಾಹಿ ವಯಹ್ಸಬೂನ ಅನ್ನಹುಮ್ ಮುಹ್ತದೂನ್. ಯಾಬನೀ ಆದಮ ಖುಝೂ ಝೀನತುಕುಮ್ ಇಂದ ಕುಲ್ಲಿ ಮಸ್ಜಿದಿವ್ವ ಕುಲೂ ವಶ್ರಬೂ ವಲಾ ತುಸ್ರಿಫೂ; ಇನ್ನಹೂ ಲಾ ಯುಹಿಬ್ಬುಲ್ ಮುಸ್ರಿಫೀನ್. (ಅಲ್-ಅಅ್‌ರಾಫ್: 30-32)**

ಈ ವಚನಗಳ ಅನುವಾದ ಹೀಗಿದೆ - ಹೇಳು: 'ನ್ಯಾಯಪಾಲನೆಯನ್ನು ನನ್ನ ಪ್ರಭು ಆದೇಶಿಸಿದ್ದಾನೆ. ಪ್ರತಿಯೊಂದು ಆರಾಧನೆಯ ಸಂದರ್ಭದಲ್ಲೂ ಸ್ಥಳದಲ್ಲೂ ನಿಮ್ಮ ಮುಖಗಳನ್ನು ಅಲ್ಲಾಹನೆಡೆಗೆ ತಿರುಗಿಸಿರಿ. ಧರ್ಮದ ವಿಚಾರದಲ್ಲಿ ಅವನಿಗೆ ಪೂರ್ಣ ವಿಧೇಯರಾಗಿದ್ದುಕೊಂಡು ಅವನನ್ನು ಕರೆದು ಪ್ರಾರ್ಥಿಸಿರಿ. ನಿಮ್ಮನ್ನು ಅವನು ಮುಂಚೆ ಸೃಷ್ಟಿಸಿದಂತೆಯೇ ಅವನೆಡೆಗೆ ನೀವು ಮರಳುವಿರಿ.' ಕೆಲವರನ್ನು ಅವನು ಸತ್ಪಥದಲ್ಲಿ ನಡೆಸಿದನು. ಬೇರೆ ಕೆಲವರು ದುರ್ಮಾರ್ಗಕ್ಕೆ ಅರ್ಹರಾದರು. ಖಂಡಿತವಾಗಿಯೂ ಅವರು ಅಲ್ಲಾಹನನ್ನು ಬಿಟ್ಟು ಶೈತಾನ್‌ಗಳನ್ನು ಮಿತ್ರರನ್ನಾಗಿ ಮಾಡಿರುವರು. ಆದರೂ ತಾವೇ ಸನ್ಮಾರ್ಗದಲ್ಲಿ ಚಲಿಸುವವರೆಂದು ಅವರು ಭಾವಿಸುತ್ತಾರೆ.

ಎಲೈ ಆದಂ ಸಂತತಿಗಳೇ, ನಿಮ್ಮ ಆರಾಧನೆಯ ಪ್ರತಿಯೊಂದು (ಸಮಯದಲ್ಲೂ) ಸ್ಥಳದಲ್ಲೂ ನಿಮ್ಮ ಅಲಂಕಾರದ ಬಗ್ಗೆ ಗಮನವಿಡಿರಿ. ನೀವು ತಿನ್ನಿರಿ, ಕುಡಿಯಿರಿ; ಆದರೆ ಮಿತಿಮೀರ ಬೇಡಿರಿ. ಮಿತಿಮೀರುವವರನ್ನು ಅಲ್ಲಾಹನು ಖಂಡಿತವಾಗಿಯೂ ಇಷ್ಟಪಡುವುದಿಲ್ಲ.

ಇಂದು ನಿಮಗೆ ನಿಮ್ಮ ಮಸೀದಿಯ ಉದ್ಘಾಟನೆ ಮಾಡಲು ಅಲ್ಲಾಹನು ಸೌಭಾಗ್ಯ ನೀಡುತ್ತಿದ್ದಾನೆ. ಇದರ ನಿರ್ಮಾಣವು ಕೆಲವು ಕಾಲದ ಮುಂಚಿತವಾಗಿಯೇ ಪೂರ್ತಿಗೊಂಡಿತ್ತು. ಆದರೆ ಇದರ ಸಾಂಪ್ರದಾಯಿಕ ಉದ್ಘಾಟನೆ ಈಗ ನಡೆಯುತ್ತಿದೆ. ಇಲ್ಲಿ ಮಸೀದಿಯಾಗಿ ಆರಂಭದಲ್ಲಿ ಒಂದು **"ಹಾಲ್"** ತಯಾರಿಸಲಾಗಿತ್ತು. ಆದರೆ ಈಗ ನೀವು ಮಸೀದಿಯನ್ನೇ ನಿರ್ಮಿಸಿದ್ದೀರಿ. ಹೇಗಿದ್ದರೂ ಈಗ ಸುಂದರವಾದ ಉತ್ತಮ ಮಸೀದಿಯ ನಿರ್ಮಾಣವಾಗಿದೆ. ಸೌಕರ್ಯದ ದೃಷ್ಟಿಯಲ್ಲೂ ಸಾಕಷ್ಟು ವಿಶಾಲವಾಗಿದೆ. ಈ ಮಸೀದಿಯ ನಿರ್ಮಾಣದಲ್ಲಿ ಪಾಲುಗಾರರಾದ ಎಲ್ಲರಿಗೂ ಈ ಮಸೀದಿಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸಲು ಅಲ್ಲಾಹನು ಸೌಭಾಗ್ಯ ನೀಡಲಿ. ನೀವು ಈ ಮಸೀದಿಯನ್ನು ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಮಾಡಿರುವುದಾಗಲಿ.

ಯಾವನು ಅಲ್ಲಾಹನ ಸಂಪ್ರೀತಿಗಾಗಿ ಮಸೀದಿ ನಿರ್ಮಾಣ ಮಾಡುತ್ತಾನೋ ಅವನಿಗಾಗಿ ಅಲ್ಲಾಹನು ಸ್ವರ್ಗದಲ್ಲಿ ಅಂತಹದ್ದೇ ಮನೆಯನ್ನು ಮಾಡುವನು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಅದರಂತೆ ನೀವು ಅನುಗ್ರಹ ಪಡೆಯುವಂತೆ ಅಲ್ಲಾಹನು ಮಾಡಲಿ. (ಸಹೀಹ್ ಮುಸ್ಲಿಮ್, ಕಿತಾಬುಲ್ ಮಸಾಜಿದ್, ಹದೀಸ್-1189)

ಅಲ್ಲಾಹನ ಸಂಪ್ರೀತಿಗಾಗಿ ನಿರ್ಮಿಸಲಾದ ಮಸೀದಿಯ ಕೆಲಸ ಮಸೀದಿ ನಿರ್ಮಾಣದ ನಂತರ ಕೊನೆಗೊಳ್ಳುವುದಿಲ್ಲ. ಬದಲಾಗಿ ಅಲ್ಲಾಹನ ಆಜ್ಞೆಗಳ ಪ್ರಕಾರ ನಡೆಯುವಾಗ, ಅವನ ಆರಾಧನೆಯ ಕರ್ತವ್ಯವನ್ನು ನಿರ್ವಹಿಸುವಾಗ, ಅವನ ಸೃಷ್ಟಿಗಳಿಗೆ ಸಂಬಂಧಿಸಿದ ಹಕ್ಕುಗಳನ್ನು ನಿರ್ವಹಿಸುವಾಗ, ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಧರ್ಮಕ್ಕೆ ಲೌಕಿಕತೆಯ ಮೇಲೆ ಆದ್ಯತೆ ನೀಡುವಾಗ ಮತ್ತು ತನ್ನ ಬೈಅತಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸುವಾಗಲೇ ಮನುಷ್ಯನು ಅಲ್ಲಾಹನ ಸಂಪ್ರೀತಿಯನ್ನು ಗಳಿಸುತ್ತಾನೆ.

ನಾವು ಕಾಲಘಟ್ಟದ ಇಮಾಂ ಮತ್ತು ಹಝ್ರತ್ ಪೈಗಂಬರ್(ಸ)ರ ಸತ್ಯವಂತ ದಾಸರಾದ ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬಿದ್ದೇವೆ ಎಂಬುದು ನಮ್ಮ ಸೌಭಾಗ್ಯವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬುವುದು ಮತ್ತು ಅವರ ಬೈಅತ್ ಮಾಡುವುದರಿಂದ ನಮ್ಮ ಮೇಲೆ ಅನೇಕ ಹೊಣೆಗಾರಿಕೆಗಳು ಇರಿಸುತ್ತದೆ. ಹಝ್ರತ್ ಮಸೀಹ್ ಮೌಊದ್(ಅ)ರನ್ನು ಬೈಅತ್ ಮಾಡಿದ ಕಾರಣದಿಂದ ನಮ್ಮ ಕೆಲಸ ಮುಕ್ತಾಯಗೊಳ್ಳುವುದಿಲ್ಲ. ಬದಲಾಗಿ ವರ್ಧಿಸುತ್ತದೆ. ಆಗಲೇ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಅಲ್ಲಾಹನು ಮಾಡಿದ ವರದಾನಗಳ ವಾಗ್ದಾನಗಳಿಗೆ ನಾವು ವಾರಸುದಾರರಾಗುವೆವು. ಆದ್ದರಿಂದ ನಮ್ಮ ಹೊಣೆಗಾರಿಕೆಗಳನ್ನು ನಮ್ಮಲ್ಲಿ ಪ್ರತಿಯೊಬ್ಬರೂ ಅರಿಯಬೇಕು.

ಈ ಮಸೀದಿಯನ್ನು ಜನನಿಬಿಡಗೊಳಿಸುವುದು ನಮ್ಮ ಹೊಣೆಗಾರಿಕೆಯಾಗಿದೆ. ಪರಸ್ಪರ ಪ್ರೀತಿ – ಸ್ನೇಹದಿಂದ ಇರುವುದು ನಮ್ಮ ಜವಾಬ್ದಾರಿಯಾಗಿದೆ. ಸಹಿಷ್ಣುತೆ ಮತ್ತು ಸಹೋದರತೆಯ ಸಂದೇಶವನ್ನು ಲೋಕದಲ್ಲಿ ಹರಡುವುದು ನಮ್ಮ ಜವಾಬ್ದಾರಿಯಾಗಿದೆ. ಇಸ್ಲಾಮಿನ ಸುಂದರ ಪಾಠವನ್ನು ಲೋಕಕ್ಕೆ ನೀಡುವುದು ನಮ್ಮ ಕರ್ತವ್ಯವಾಗಿದೆ. ಸತತವಾದ ದುಆಗಳ ಮೂಲಕ ತಮ್ಮ ಸುಧಾರಣೆಯ ಕಡೆಗೆ ಗಮನಹರಿಸುವುದು ನಮ್ಮ ಹೊಣೆಗಾರಿಕೆಯಾಗಿದೆ. ತಮ್ಮ ಸಂತಾನಗಳ ಸುಧಾರಣೆಯ ಬಗ್ಗೆ ಚಿಂತಿಸುವುದು ನಮ್ಮ ಜವಾಬ್ದಾರಿಯಾಗಿದೆ. ಆಗಲೇ ನಾವು ಮಸೀದಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವವರಾಗುವೆವು.

ಇಸ್ಲಾಮನ್ನು ಪರಿಚಯಿಸಲು ಬಯಸುವ ಸ್ಥಳದಲ್ಲಿ ಮಸೀದಿಯನ್ನು ನೀವು ನಿರ್ಮಿಸಿರಿ ಎಂದು ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ್ದರು. (ಮಲ್‌ಫೂಝಾತ್, ಸಂಪುಟ–7, ಪುಟ–119, ಮುದ್ರಣ–1984) ಈಗ ಈ ಮಸೀದಿಯ ನಿರ್ಮಾಣದಿಂದ ಬಾಹ್ಯವಾಗಿ ಇಸ್ಲಾಮಿನ ಪರಿಚಯವಂತೂ ಈ ಪ್ರದೇಶದಲ್ಲಿ ಆಗುವುದು. ಕೆಲವು ದಿನಗಳಿಂದ ಇಲ್ಲಿ ಜನಜಂಗುಳಿ, ನೂಕುನುಗ್ಗಲು ಮತ್ತು ಗದ್ದಲವಿದ್ದರೂ ಕೆಲವು ನೆರೆಕರೆಯವರು ಬಂದಿದ್ದರು ಮತ್ತು ಅವರು ತಮ್ಮ ಉತ್ತಮ ಅನಿಸಿಕೆಯನ್ನು ವ್ಯಕ್ತಪಡಿಸಿಕೊಂಡಿದ್ದರು. ಸಮೀಪದಲ್ಲೇ ಇರುವ ಒಬ್ಬ ನೆರೆಕರೆಯವರು ಕೆಲವು ದಿನಗಳ ಹಿಂದೆ ಬಂದಿದ್ದರು. ಅಹ್ಮದಿಯರನ್ನು ನೆರೆಕರೆಯವರಾಗಿ ಲಭಿಸಿದ ಕಾರಣದಿಂದ ನಾವು ಸಂತುಷ್ಟರಾಗಿದ್ದೇವೆ ಎಂದು ಅವರು ಹೇಳಿದ್ದರು. ಆದರೆ ಹೇಗಿದ್ದರೂ ನಾವು ನಮ್ಮ ನೆರೆಕರೆಯವರ ಕಾಳಜಿ ವಹಿಸಬೇಕು. ಅನಾವಶ್ಯಕವಾದ ಗದ್ದಲ ಇರಬಾರದು. ಕಾನೂನಿನ ಮಿತಿಯಲ್ಲಿದ್ದುಕೊಂಡು ಎಲ್ಲ ಕೆಲಸಗಳನ್ನು ಮಾಡಬೇಕು. ಹೇಗಿದ್ದರೂ ಮಸೀದಿಯ ಪರಿಚಯ ನೆರೆಕರೆಯವರಿಗೂ ಇರಬಹುದು. ಇಲ್ಲಿಯ ಮಾರ್ಗಗಳಿಂದ ಸಾಗುವವರಿಗೂ ಇರಬಹುದು. ಈ ರೀತಿಯ ಪರಿಚಯದ ರಸ್ತೆ ತೆರೆದಿರುವುದರಿಂದ ತಬ್ಲೀಗಿನ ರಸ್ತೆಗಳು ಕೂಡ ತೆರೆಯಲ್ಪಡುವುವು. ಆದ್ದರಿಂದ ಪ್ರತಿಯೊಬ್ಬ ಅಹ್ಮದಿಯು ಇಸ್ಲಾಮಿನ ಬೋಧನೆಗಳ ಮಾದರಿಯೂ ಆಗಬೇಕಾಗುವುದು ಮತ್ತು ಆಗಬೇಕು. ಲೋಕದಲ್ಲಿ ಇದ್ದುಕೊಂಡು ಲೌಕಿಕವಾದ ಕೆಲಸಗಳನ್ನು ಮಾಡುತ್ತಲೂ ಧರ್ಮಕ್ಕೆ ಪ್ರಾಮುಖ್ಯ ಮತ್ತು ಆದ್ಯತೆ ನೀಡುವವರೂ ಶಕ್ತನೂ ಸಮರ್ಥನೂ ಆದ ತನ್ನ ಸೃಷ್ಟಿಕರ್ತನೊಂದಿಗೆ ಸಂಬಂಧವಿರಿಸುವವರೂ ಸೃಷ್ಟಿಗಳೊಂದಿಗೆ ಸಹಾನುಭೂತಿ ತೋರಿಸುವವರೂ ಸೃಷ್ಟಿಗಳ ಸೇವೆ ಮಾಡುವವರೂ ಆದ ಜನರು ಈ ಲೌಕಿಕವಾದ ಸಮಾಜದಲ್ಲಿ ಇರುವರು ಎಂದು ಸ್ಪಷ್ಟವಾಗಿ ಲೋಕದ ಜನರಿಗೆ ತೋರುವಂತಹ ವ್ಯತ್ಯಾಸ ನಿಮ್ಮಲ್ಲಿ ಇರಬೇಕು. ಈ ಸಂಗತಿಗಳನ್ನು ಒಬ್ಬ ಲೌಕಿಕನಾದ ವ್ಯಕ್ತಿ ನೋಡುವಾಗ ಅವನಲ್ಲಿ ಸತ್ಯಾನ್ವೇಷಣೆ ಮಾಡಲು ಆಸಕ್ತಿ ಉಂಟಾಗುವುದು. ಅನಂತರ ಅದೇ ಇಸ್ಲಾಮಿನ ತಬ್ಲೀಗಿನ ಮಾರ್ಗವನ್ನು ತೆರೆಯುತ್ತದೆ. ಆದ್ದರಿಂದ ಪ್ರತಿಯೊಬ್ಬ ಅಹ್ಮದಿಯು ಮೊದಲಿಗಿಂತ ಹೆಚ್ಚಾಗಿ ಇಸ್ಲಾಮಿನ ಅಧ್ಯಾಪನೆಗಳ ಕರ್ಮಪರವಾದ ಮಾದರಿಯಾಗಬೇಕಾದ ಆವಶ್ಯಕತೆಯಿದೆ.

ನಾನು ಪಠಿಸಿದ ವಚನಗಳಲ್ಲಿ ಮಸೀದಿಗಳಿಗೆ ಸಂಬಂಧಿಸಿದ ಕೆಲವು ಹೊಣೆಗಾರಿಕೆಗಳ ಕುರಿತು ಅಲ್ಲಾಹನು ಗಮನ ಸೆಳೆದಿರುವನು. ಮೊತ್ತಮೊದಲಾಗಿ ನ್ಯಾಯಪಾಲನೆ ಮಾಡಲು ಹೇಳಿರುವನು. ಯಾವುದೇ ಸಮುದಾಯದೊಂದಿಗೆ ಇರುವ ಶತ್ರುತ್ವ ನಿಮ್ಮನ್ನು ನ್ಯಾಯಪಾಲನೆಯಿಂದ ದೂರಸರಿಸದಿರಲಿ. ನ್ಯಾಯಪಾಲನೆಯ ಈ ಮಟ್ಟವನ್ನು ನೆಲೆನಿಲ್ಲಿಸುವವನು ಎಂದಿಗೂ ಇತರರ ಕುರಿತು ತಪ್ಪಾದ ಯೋಚನೆ ಇರಿಸಲಾರನು. ಇತರರಿಗೆ ನಷ್ಟ ತಲುಪಿಸುವ ಪ್ರಶ್ನೆಯೇ ಉದಿಸುವುದಿಲ್ಲ. ಅಂತವನು ಇತರರಿಗೆ ಪ್ರಯೋಜನ ತಲುಪಿಸಲು ಏನು ಮಾಡಬೇಕು ಎಂಬುವುದಕ್ಕೆ ಸಂದರ್ಭವನ್ನು ಹುಡುಕುವನು. ಈ ರೀತಿಯಾಗಿ ಹಕ್ಕುಗಳನ್ನು ಸ್ಥಾಪಿಸುವವನು ಖಂಡಿತವಾಗಿಯೂ ತನ್ನ ಸುತ್ತಮುತ್ತ ಒಂದು ಉತ್ತಮ ಪ್ರಭಾವವನ್ನು ಬೀರುತ್ತಾನೆ. ಇದೇ ಉತ್ತಮ ಪ್ರಭಾವವು ತಬ್ಲೀಗಿನ ಮಾರ್ಗವನ್ನು ತೆರೆಯುತ್ತದೆ. ಆದ್ದರಿಂದ ಮಸೀದಿಗಳಿಗೆ ಬರುವ ನೈಜ ಸತ್ಯವಿಶ್ವಾಸಿಗಳೊಡನೆ ಮೊತ್ತಮೊದಲಾಗಿ ಸೃಷ್ಟಿಗಳಿಗೆ ಸಂಬಂಧಿಸಿದ ಹಕ್ಕುಗಳನ್ನು ನಿರ್ವಹಿಸಲು ಉಪದೇಶಿಸಲಾಗಿದೆ. ಅದರಲ್ಲಿ ಮೊತ್ತಮೊದಲನೆಯದಾಗಿ ನ್ಯಾಯಪಾಲನೆ ಮಾಡುವುದಾಗಿದೆ. ಅನ್ಯರೊಡನೆ ಮತ್ತು ಶತ್ರುಗಳೊಡನೆ ಕೂಡ ನ್ಯಾಯಪಾಲಿಸಲು ಉಪದೇಶಿಸಿರುವಾಗ ಸ್ವಂತ ಜನರೊಂದಿಗೆ ಎಷ್ಟು ಪ್ರೀತಿ ಮತ್ತು ಸ್ನೇಹದಿಂದ ನಾವು ಇರಬೇಕಾಗಿದೆ ಎಂದು ಅರಿಯಬೇಕು. ಇಂತಹ ಸ್ಥಿತಿ ಉಂಟಾಗುವಾಗ ಅಲ್ಲಾಹನ ಪ್ರೀತಿಯ ದೃಷ್ಟಿ ಕೂಡ ಅಂತಹ ಜನರ ಮೇಲೆ ಬೀಳುತ್ತದೆ. ಇಂತಹ ಜನರು ಮಸೀದಿಗೆ ಅಲ್ಲಾಹನ ಆರಾಧನೆಗಾಗಿ ಪ್ರವೇಶಿಸುವಾಗ ಅಲ್ಲಾಹನು ಅವರ ಆರಾಧನೆಯನ್ನು ಸ್ವೀಕಾರ ಮಾಡುತ್ತಾನೆ. ಆದರೆ ಯಾವನಾದರೂ ಮನೆಯಲ್ಲಿ ತನ್ನ ಪತ್ನಿ ಮತ್ತು ಮಕ್ಕಳೊಂದಿಗೆ ಉತ್ತಮವಾಗಿ ವರ್ತಿಸುವುದಿಲ್ಲವೆಂದಾದರೆ, ಯಾವಾಗಲೂ ಅವರಿಗೆ ಉಪದ್ರವ ಕೊಡುತ್ತಿದ್ದಾನೆ ಎಂದಾದರೆ, ಮಕ್ಕಳು ಕೂಡ ಅವನಿಂದ ಭಯಗೊಂಡಿರುವುದಾದರೆ, ಅವನು ತನ್ನ ವರ್ತನೆಯಿಂದ ಮಕ್ಕಳನ್ನು ಧರ್ಮದಿಂದ ದೂರ ಸರಿಸಲು ಕಾರಣಕರ್ತನಾಗುತ್ತಿದ್ದಾನೆ ಎಂದಾದರೆ, ಅಂತಹ ವ್ಯಕ್ತಿಯ ಜಮಾಅತೀ ಕೆಲಸಗಳು ಮತ್ತು ಆರಾಧನೆಗಳು ಅಲ್ಲಾಹನ ಮುಂದೆ ಸ್ವೀಕಾರ ಯೋಗ್ಯವಲ್ಲ. ಈ ಕಪಟ ಸ್ವಭಾವದಿಂದ ಅವನು ಬೇರೆ ಯಾರಿಗೂ ಅಲ್ಲ, ಬದಲಾಗಿ ತನಗೇ ಮೋಸ ಮಾಡುತ್ತಿರುತ್ತಾನೆ.

ಆದ್ದರಿಂದ ಹೊರಗೂ ಒಳಗೂ ನ್ಯಾಯಪಾಲನೆ ಮಾಡುವವನೇ ನೈಜ ಸತ್ಯವಿಶ್ವಾಸಿಯಾಗಿರುತ್ತಾನೆ. ಯಾರ ಮಾತು ಮತ್ತು ಕೃತಿ ಒಂದೇ ತರ ಆಗಿರುತ್ತವೋ, ಅಂತಹ ಜನರೇ ಸತ್ಯದಲ್ಲಿ ಮಸೀದಿಯನ್ನು ತುಂಬಿಸುವ ಕರ್ತವ್ಯವನ್ನು ನಿರ್ವಹಿಸುವವರಾಗಿರುತ್ತಾರೆ. ಏಕೆಂದರೆ, ಅವರ ಹೃದಯ ಅಲ್ಲಾಹನ ಭಯದಿಂದ ತುಂಬಿರುತ್ತದೆ.

ಈ ಮಟ್ಟವನ್ನು ಗಳಿಸುವುದು ನಮ್ಮ ಕೆಲಸವಾಗಿದೆ. ಇಲ್ಲದಿದ್ದರೆ, ಮಸೀದಿಯನ್ನು ನಿರ್ಮಿಸುವುದು ಮತ್ತು ಇಲ್ಲಿಗೆ ಬಂದು ಬೇಗ ಬೇಗನೇ ನಮಾಝ್ ನಿರ್ವಹಿಸಿ ಹೆಗಲಿನಿಂದ ಭಾರ ಇಳಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಮನುಷ್ಯನು ಈ ಮಟ್ಟವನ್ನು ಗಳಿಸುವಾಗ, ಅವನು ಅಲ್ಲಾಹನ ಮುಂದೆ ಒಂದು ಮುಗ್ಧ ಮಗುವಿನ ಹಾಗೆ ಆಗಿದೆ. ಅವನ ಕೊನೆ ಉತ್ತಮವಾಗಿರುವುದು. ಏಕೆಂದರೆ, ಅವನು ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳ ಜೊತೆಗೆ ಸೃಷ್ಟಿಗಳ ಹಕ್ಕುಗಳನ್ನು ಕೂಡ ನಿರ್ವಹಿಸುತ್ತಾನೆ. ಆದ್ದರಿಂದ ಬಹಳವಾಗಿ ನಮಾಝ್‌ಗಳನ್ನು ಅನುಷ್ಠಿಸುವವನೆಂದೋ ಜಮಾಅತಿನ ಕೆಲಸಗಳನ್ನು ಮಾಡುವವನೆಂದೋ ಹೇಳಿಕೊಂಡು ಯಾರೂ ಜಂಬಕೊಚ್ಚಬಾರದು. ಯಾರು ಮಾನವನಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವುದಿಲ್ಲವೋ ಅವನು ಅಲ್ಲಾಹನಿಗೆ ಸಂಬಂಧಿಸಿದ ಹಕ್ಕುಗಳನ್ನು ಕೂಡ ನಿರ್ವಹಿಸದಂತೆ ಆಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. (ಜಾಮೆ ತಿರ್ಮಿಝಿ, ಅಬ್ವಾಬುಲ್ ಬಿರ್ರಿ ವಸ್ಸಿಲ, ಹದೀಸ್–1954)

ಅಲ್ಲಾಹನ ಭಯವನ್ನು ತನ್ನೊಳಗೆ ಇರಿಸಿಕೊಂಡು ಅಲ್ಲಾಹನ ಆದೇಶಗಳನ್ನು ಪಾಲಿಸುವವರೇ ನಿಜವಾದ ಆರಾಧಕ ಮತ್ತು ಮಸೀದಿಯನ್ನು ತುಂಬಿಸುವವರಾಗಿರುತ್ತಾರೆ. ನೀವು ಅಲ್ಲಾಹನ ಆದೇಶಗಳನ್ನು ಪಾಲಿಸುವುದಿಲ್ಲವಾದರೆ, ಧರ್ಮವನ್ನು ಅಲ್ಲಾಹನಿಗೆ ಮಾತ್ರವಾಗಿಸಿಕೊಂಡು ತಮ್ಮ ಸ್ಥಿತಿಗತಿಗಳಲ್ಲಿ ಬದಲಾವಣೆ ಮಾಡಲು ಪ್ರಯತ್ನಿಸುವುದಿಲ್ಲವಾದರೆ ಶೈತಾನನು ನಿಮ್ಮ ಮೇಲೆ ಮೇಲುಗೈ ಸಾಧಿಸುವನು ಎಂದು ಅಲ್ಲಾಹನು ಹೇಳುತ್ತಾನೆ. ಇಂದಿನ ಈ ಲೌಕಿಕ ವಾತಾವರಣದಲ್ಲಿ ಈ ಕುರಿತು ಗಮನಹರಿಸಬೇಕಾದ ಬಹಳ ಆವಶ್ಯಕತೆಯಿದೆ. ಆಗಲೇ ಯಶಸ್ಸು ಲಭಿಸುವುದು. ಆಗಲೇ ಒಂದು ಮುಗ್ಧ ಮಗುವಿನ ಹಾಗೆ ಅಲ್ಲಾಹನ ಮುಂದೆ ಹಾಜರಾಗುವಿರಿ.

ನ್ಯಾಯಪಾಲನೆಯನ್ನು ಬಿಟ್ಟು ಅಲ್ಲಾಹನ ಆರಾಧನೆಗಳನ್ನು ಕೇವಲ ತೋರಿಕೆಯನ್ನಾಗಿ ಮಾಡಿದಾಗಲೇ ಮುಸ್ಲಿಮರ ಅವನತಿ ಉಂಟಾಯಿತು. ಆಗ ಎಲ್ಲವೂ ವ್ಯರ್ಥವಾಯಿತು.

ಸುಂದರವಾದ ಮಸೀದಿಗಳನ್ನು ಮಾಡುತ್ತಾರೆ. ಪಾಕಿಸ್ತಾನದಲ್ಲಂತೂ ಅಹ್ಮದಿಯರ ಮಸೀದಿಗಳನ್ನು ಕೆಡವಿ ಹಾಕಲು ಹೆಚ್ಚು ಒತ್ತು ನೀಡಲಾಗುತ್ತಿದೆ. ಅಹ್ಮದಿಯರ ಮೇಲೆ ದೌರ್ಜನ್ಯ ಮಾಡುತ್ತಿದ್ದೇವೆ ಎಂಬುದರಲ್ಲಿ ಹೆಮ್ಮೆ

ಪಡುತ್ತಾರೆ. ಇವೆಲ್ಲವೂ ಆಗುವುದು ಎಂದು ಹಝ್ರತ್ ಪೈಗಂಬರ್(ಸ) ತಿಳಿಸಿದ್ದರು. ಆದರೆ ಅಂಧಕಾರದ ಯುಗದ ನಂತರ ಪ್ರಕಾಶದ ಯುಗ ಮಸೀಹ್ ಮೌಊದ್‌ರ ಆಗಮನದಿಂದ ಬಂದಿದೆ. ಹಝ್ರತ್ ಪೈಗಂಬರ್(ಸ)ರ ಸತ್ಯಪ್ರೇಮಿಯನ್ನು ಬೈಅತ್ ಮಾಡುವ ಸೌಭಾಗ್ಯ ನಮಗೆ ಲಭಿಸಿದೆ. ಧರ್ಮಕ್ಕೆ ಭೌತಿಕತೆಗಿಂತ ಪ್ರಾಮುಖ್ಯ ನೀಡುತ್ತೇವೆ ಮತ್ತು ಪವಿತ್ರ ಖುರ್‌ಆನಿನ ಆದೇಶಗಳ ಪ್ರಕಾರ ನಡೆಯುವೆವು ಎಂದು ನಾವು ಪ್ರತಿಜ್ಞೆ ಕೂಡ ಮಾಡಿದ್ದೇವೆ. ಆದ್ದರಿಂದ ನಾನು ಹೇಳಿದಂತೆ ನಮ್ಮ ಸ್ಥಿತಿಗಳ ಕುರಿತು ಬಹಳ ಹೆಚ್ಚು ಗಮನ ನೀಡಬೇಕಾಗಿದೆ. ಅನ್ಯರ ಮಸೀದಿಗಳ ಸ್ಥಿತಿಯಂತೆ ನಮ್ಮದು ಆಗದಂತೆ ಗಮನವಹಿಸಬೇಕಾಗಿದೆ. ಇದರ ಕುರಿತು ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಅಲಿ(ರ) ಹೀಗೆ ವರದಿ ಮಾಡಿರುವರು: ಇಸ್ಲಾಮಿನ ಹೆಸರು ಅಲ್ಲದೇ ಬೇರೇನೂ ಬಾಕಿಯಿರದ ಒಂದು ಕಾಲ ಸಮೀಪ ಕಾಲದಲ್ಲೇ ಬರುವುದು. ಪದಗಳಲ್ಲದೇ ಪವಿತ್ರ ಖುರ್‌ಆನಿನ ಬೇರೇನೂ ಬಾಕಿಯಿರದು. ಆ ಕಾಲದ ಜನರ ಮಸೀದಿಗಳು ಬಾಹ್ಯವಾಗಿ ಜನಬಾಹುಳ್ಯವುಳ್ಳದ್ದಾಗಿರುವುದು. ಆದರೆ ಸನ್ಮಾರ್ಗದಿಂದ ಖಾಲಿಯಾಗಿರುವುದು. ಅವರ ಪಂಡಿತರು ಆಕಾಶದ ಕೆಳಗೆ ವಾಸಿಸುವ ಜೀವಿಗಳಲ್ಲೇ ಅತ್ಯಂತ ನಿಕೃಷ್ಟರಾಗುವರು. ಅವರಿಂದಲೇ ಪಿತೂರಿಗಳು ಏಳುವುವು ಮತ್ತು ಅವರ ಬಳಿಗೆ ಅದು ಮರಳುವುವು.

(ಅಲ್‌ಜಾಮಿ ಅಶ್ಶೊಬುಲ್ ಈಮಾನ್, ಮಕ್ತಬ ಅರ್‍ರುಶಿದ್ನಾ ಶುರೂನ್ ರಿಯಾಝ್ 2003)

ಇವುಗಳನ್ನೇ ನಾವು ಇಂದು ಮುಸ್ಲಿಮರ ಹೆಚ್ಚಿನ ಮಸೀದಿಗಳಲ್ಲಿ ನೋಡುತ್ತಿದ್ದೇವೆ. ಅವರ ಈ ಸ್ಥಿತಿಯು ನಮಗೆ ಮುನ್ನೆಚ್ಚರಿಕೆ ನೀಡುವುದಾಗಿದೆ. ಅವರಲ್ಲಿ ಫಿತ್ನಗಳ ಹೊರತು ಬೇರೇನೂ ಇಲ್ಲ. ಅಹ್ಮದಿಯರ ಮಸೀದಿಗಳ ಮಿನಾರವನ್ನು ಬೀಳಿಸಲು ಒತ್ತು ನೀಡುತ್ತಾರೆ. ನಮ್ಮ ಮಸೀದಿಗಳನ್ನು ಮಸೀದಿಯೆನ್ನದೇ ಆರಾಧನಾಲಯವೆಂದು ಹೇಳುತ್ತಾರೆ. ಯಾವುದೇ ಧಾರ್ಮಿಕ ಸೇವೆಗಳನ್ನು ಮಾಡುವುದಿಲ್ಲ. ಯಾವುದೇ ನ್ಯಾಯಪಾಲನೆಯಿಲ್ಲ. ನಾವು ಹೇಗೆ ನಿಷ್ಠಾವಂತರಾಗಿ ಮಸೀದಿಗಳ ಮತ್ತು ಸೃಷ್ಟಿಗಳ ಹಕ್ಕುಗಳನ್ನು ನಿರ್ವಹಿಸಬೇಕೆಂಬ ಪಾಠ ಇವರ ದುರಾವಸ್ಥೆಯಿಂದ ನಮಗೆ ಲಭಿಸುತ್ತದೆ.

ನಾನು ಪಠಿಸಿದ ಮೊದಲ ವಚನವನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಆಂತರಿಕವಾಗಿ ಇಸ್ಲಾಮಿನ ಸ್ಥಿತಿ ಬಹಳ ದುರ್ಬಲವಾಗಿದೆ. ಇಸ್ಲಾಮಿಕ ಆಡಳಿತಕ್ಕೆ ವೈಭವ ಮತ್ತು ಶಕ್ತಿ ಇಲ್ಲ. ಹೊರಗಿನಿಂದ ದಾಳಿ ನಡೆಸುವವರು ಇಸ್ಲಾಮನ್ನು ನಾಶಮಾಡಲು ಬಯಸುತ್ತಾರೆ. ಅವರ ಪ್ರಕಾರ ಮುಸ್ಲಿಮರು ಹಂದಿಗಳಿಗಿಂತಲೂ ನಾಯಿಗಳಿಗಿಂತಲೂ ನಿಕೃಷ್ಟರು. ಇಸ್ಲಾಮನ್ನು ನಾಶ ಮಾಡಲು ಮತ್ತು ಮುಸ್ಲಿಮರನ್ನು ನಿರ್ಮೂಲನ ಮಾಡಲು ಅವರು ಬಯಸುತ್ತಾರೆ.......

ಈಗ ದೈವಿಕ ಗ್ರಂಥ, ದೈವಿಕ ಸಹಾಯ ಮತ್ತು ಸ್ಪಷ್ಟವಾದ ದೃಷ್ಟಾಂತಗಳ ಮೂಲಕವಲ್ಲದೇ ಶತ್ರುಗಳನ್ನು ಎದುರಿಸಲು ಸಾಧ್ಯವಲ್ಲ. ಇದೇ ಉದ್ದೇಶಕ್ಕಾಗಿ ಅಲ್ಲಾಹನು ತನ್ನ ಕೈಯಿಂದಲೇ ಈ ಜಮಾಅತನ್ನು ಸ್ಥಾಪಿಸಿದ್ದಾನೆ.

(ಮಲ್‌ಫೂಝಾತ್, ಸಂಪುಟ–3, ಪುಟ–450, ಆವೃತಿ 1984)

ಆದ್ದರಿಂದ ಇಂತಹ ಸ್ಥಿತಿಯಲ್ಲಿ ಈಗ ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬುವವರು ತಮ್ಮ ಸ್ಥಿತಿಗಳನ್ನು ಬೈಅತಿನ ಹಕ್ಕನ್ನು ನಿರ್ವಹಿಸುತ್ತಾ ಪವಿತ್ರ ಖುರ್‌ಆನಿನ ಅಧ್ಯಾಪನೆಗಳ ಪ್ರಕಾರ ಸರಿಪಡಿಸುವುದಿಲ್ಲವೆಂದಾದರೆ, ತಮ್ಮ ಸ್ಥಿತಿಗಳ ಬಗ್ಗೆ ಸದಾ ದೃಷ್ಟಿ ಇರಿಸುವುದಿಲ್ಲವಾದರೆ, ನಾವು ಇಸ್ಲಾಮಿನ ಪುನರುಜ್ಜೀವನದ ಈ ಕಾಲದಲ್ಲಿ ಬೈಅತ್ತಿನ ಹಕ್ಕನ್ನು ಈಡೇರಿಸುವವರಾಗಲಾರೆವು. ಇಸ್ಲಾಮಿನ ನಷ್ಟಹೊಂದಿದ ಕೀರ್ತಿಯನ್ನು ಪುನಃ ಪೂರ್ವ ಸ್ಥಿತಿಗೆ ತರುವುದು ನಮ್ಮದೇ ಕೆಲಸವಾಗಿದೆ.

ಇಂದು ಸಂಪೂರ್ಣ ಆತ್ಮವಿಶ್ವಾಸದೊಂದಿಗೆ ಮತ್ತು ಅಲ್ಲಾಹನ ಮುಂದೆ ಬಾಗುತ್ತಾ ಅವನಿಂದ ಅನುಗ್ರಹಗಳನ್ನು ಬೇಡುತ್ತಾ ನಾವು ಲೋಕಕ್ಕೆ ಮಾರ್ಗದರ್ಶನ ನೀಡಬೇಕಾಗಿದೆ. ಏಕೆಂದರೆ ನಾವು ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬುವವರಾಗಿದ್ದೇವೆ. ಲೋಕವನ್ನು ಸಜೀವಗೊಳಿಸಲು ಮತ್ತು ಹಝ್ರತ್ ಪೈಗಂಬರ್(ಸ)ರ ಅಧ್ಯಾಪನೆಗಳನ್ನು ಲೋಕದಲ್ಲಿ ಹರಡಲು ಅವರನ್ನು ಕಳುಹಿಸಲಾಗಿದೆ. ಈಗ ಈ ಬೋಧನೆಗಳನ್ನು ಪಾಲಿಸುವುದರಿಂದಲೇ ಮೋಕ್ಷ ಲಭಿಸುವುದು. ಪರಲೋಕಕ್ಕೆ ಮನುಷ್ಯನು ಬರಿಗೈಯಿಂದ ಹೋಗುವನಾದರೆ, ಅಲ್ಲಾಹನ ಅಸಂತುಷ್ಟಿಯನ್ನು ಎದುರಿಸಬೇಕಾಗುವುದು. ಅನಂತರ ಅವನು ಹೇಗೆ ವರ್ತಿಸುವನು ಎಂದು ಅವನೇ ಬಲ್ಲನು. ನಾವು ಲೋಕಕ್ಕೆ ಇಷ್ಟು ವಿಶದವಾಗಿ ಎಚ್ಚರಿಸುತ್ತಿರುವಾಗ ನಮ್ಮ ಪ್ರತಿಯೊಂದು ಮಾತು ಮತ್ತು ಕೃತ್ಯ ಕೂಡ ಅದರ ಅಧ್ಯಾಪನೆಗಳ ಪ್ರಕಾರವಾಗಿರಬೇಕು ಎಂಬುದನ್ನು ನಾವು ನೆನಪಿನಲ್ಲಿಡಬೇಕು. ನಮ್ಮ ಆರಾಧನೆಗಳ ಮತ್ತು ನಮ್ಮ ಸೃಷ್ಟಿಸೇವೆಯ ಮಟ್ಟ ಉನ್ನತವಾಗಿರಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ ಕಾಲದಲ್ಲಿ ಇಸ್ಲಾಂ ವ್ಯತ್ಯಾಸಗೊಂಡಿದೆ. ಎಲ್ಲ ರೀತಿಯ ಕೀಳು ಗುಣಗಳಿಂದ ಅದು ತುಂಬಿ ಹೋಗಿದೆ. ಯಾವುದೇ ಉನ್ನತ ನೈತಿಕ ಗುಣ ಇಲ್ಲವಾಗಿದೆ. ದೇವನಿಷ್ಠೆ ಮತ್ತು ದೇವಪ್ರೀತಿ ಮಾಯವಾಗಿ ಬಿಟ್ಟಿದೆ. ಇದನ್ನು ಪುನರುಜ್ಜೀವನಗೊಳಿಸಲು ಅಲ್ಲಾಹನು ಈಗ ಬಯಸಿದ್ದಾನೆ. (ಮಲ್‌ಫೂಝಾತ್, ಸಂಪುಟ–7, ಪುಟ–352–353, 1984 ಆವೃತಿ)

ಇಸ್ಲಾಮಿನ ಈ ಸ್ಥಿತಿಯನ್ನು ಸುಧಾರಿಸಲಿಕ್ಕಾಗಿ ನಾವು ಅಲ್ಲಾಹನು ಕಳುಹಿಸಿದ ಪ್ರವಾದಿಯೊಂದಿಗೆ ಹೊಂದಿಕೊಂಡಿದ್ದೇವೆ. ಇಂದು ಅಲ್ಲಾಹನೊಂದಿಗೆ ಇರಿಸಬೇಕಾದ ನಿಷ್ಠೆಯ ಮಟ್ಟವನ್ನು ಸ್ಥಾಪಿಸಬೇಕಾದವರು ನಾವೇ ಆಗಿದ್ದೇವೆ. ಆದ್ದರಿಂದ ಪ್ರಾಮಾಣಿಕತೆ ಮತ್ತು ನಂಬಿಕೆಯಿಂದ ಅಲ್ಲಾಹನೊಂದಿಗೆ ಇರಿಸಬೇಕಾದ ನಿಷ್ಠೆಯನ್ನು ಇರಿಸಬೇಕಾಗಿದೆ. ನಾವು ಎಲ್ಲೆಡೆ ಪ್ರೀತಿಯನ್ನು ಹರಡಬೇಕು, ಹಗೆಯನ್ನು ದೂರಮಾಡಬೇಕು. ನಮಗೆ ಅಲ್ಲಾಹನ ಮೇಲೆ ಪರಿಪೂರ್ಣ ಭರವಸೆ ಇರಬೇಕು. ಏಕೆಂದರೆ, ಪ್ರತಿಯೊಂದು ಕೆಲಸವನ್ನು ಸರಿಪಡಿಸುವವನು ಅವನೇ ಆಗಿದ್ದಾನೆ. ಈಗ ಲೋಕದಲ್ಲಿ ಜಯಿಸುವ ಧರ್ಮ ಇಸ್ಲಾಮೇ ಆಗಿದೆ. ಅದಕ್ಕಾಗಿ ನಾವು ನಮ್ಮ ಎಲ್ಲ ಸಾಮರ್ಥ್ಯಗಳನ್ನು ಉಪಯೋಗಿಸಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್(ಅ)ರ ಸಮರ್ಥ ಸಹಾಯಕರಾಗಬೇಕು. ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಒಪ್ಪಿಸಲಾದ ಕಾರ್ಯಗಳು ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಅಲ್ಲಾಹನು ಮಾಡಿದ ವಾಗ್ದಾನಗಳು ಖಂಡಿತ ಈಡೇರುವುವು ಎಂಬುದು ಅಲ್ಲಾಹನ ವಿಧಿಯಾಗಿದೆ. ನಾವು ಈ ಕೆಲಸಗಳಲ್ಲಿ ಸಹಾಯಕರಾದರೆ, ಅಲ್ಲಾಹನ ಅನುಗ್ರಹಗಳನ್ನು ಗಳಿಸುವವರಾಗುವೆವು. ನಾವು ಮುಂದೆ ಬರುವುದಿಲ್ಲವೆಂದಾದರೆ, ಅಲ್ಲಾಹನು ಬೇರೆ ಜನರನ್ನು ಸಹಾಯಕ್ಕಾಗಿ ಕಳುಹಿಸುವನು. ಏಕೆಂದರೆ, ಕೆಲಸ ನಡೆಯಲೇ ಬೇಕಾಗಿದೆ. ಆದ್ದರಿಂದ ನಾವು ನಮ್ಮ ಕೊರತೆಗಳನ್ನು ಮತ್ತು ದೌರ್ಬಲ್ಯಗಳನ್ನು ದೂರ ಮಾಡುವುದರ ಕಡೆಗೆ ಗಮನ ಹರಿಸಬೇಕಾದ ಆವಶ್ಯಕತೆಯಿದೆ.

ನಮ್ಮ ಯಾವ ದೌರ್ಬಲ್ಯಗಳನ್ನು ದೂರಗೊಳಿಸಬೇಕು ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ ಕಾಲದಲ್ಲಿ ತೋರಿಕೆ, ಅಹಂಕಾರ, ಅಹಂಭಾವ, ಗರ್ವ ಇತ್ಯಾದಿಗಳು ವರ್ಧಿಸಿವೆ. ಉತ್ತಮ ಗುಣಗಳು ಇಲ್ಲವಾಗಿವೆ. ಭರವಸೆ ಮತ್ತು ಪ್ರಯತ್ನ ಮಾಯವಾಗಿವೆ. ಆದರೆ ಇವುಗಳ ಬೀಜ ಬಿತ್ತಬೇಕು ಎಂದು ಈಗ ಅಲ್ಲಾಹನು ಉದ್ದೇಶಿಸಿದ್ದಾನೆ.(ಮಲ್‌ಫೂಝಾತ್ ಸಂಪುಟ–6, ಪುಟ–353, ಅಡಿಟಿಪ್ಪಣಿ)

ಅಲ್ಲಾಹನು ತನ್ನ ದಾಸರನ್ನು ವ್ಯರ್ಥಗೊಳಿಸುವುದಿಲ್ಲ. ಒಳಿತುಗಳು ವರ್ಧಿಸಬೇಕು ಮತ್ತು ಕೆಡುಕುಗಳು ಕೊನೆಗೊಳ್ಳಬೇಕು ಎಂದು ಅವನು ಬಯಸಿದ್ದಾನೆ. ಆದ್ದರಿಂದ ನಾವು ಹಝ್ರತ್ ಮಸೀಹ್ ಮೌಊದ್(ಅ)ರ ಕೆಲಸವನ್ನು ಪೂರ್ಣಗೊಳಿಸಲಿಕ್ಕಾಗಿ, ಒಳಿತುಗಳನ್ನು ಮಾಡಲಿಕ್ಕಾಗಿ, ಆರಾಧನೆಗಳ ಉನ್ನತ ಮಟ್ಟವನ್ನು ಗಳಿಸಲಿಕ್ಕಾಗಿ ಮತ್ತು ಅಲ್ಲಾಹನ ಅನುಗ್ರಹಗಳನ್ನು ಗಳಿಸಲಿಕ್ಕಾಗಿ ಪರಿಪೂರ್ಣವಾದ ಪ್ರಯತ್ನವನ್ನು ಮಾಡುತ್ತಿದ್ದೇವೆಯೇ ಎಂದು ನಾವು ಅವಲೋಕನ ನಡೆಸಬೇಕಾಗಿದೆ. ನಾವು ಪ್ರಾಮಾಣಿಕವಾದ ಆರಾಧನೆಗಳ ಮೂಲಕ ಹೀಗೆ ಮಾಡುತ್ತಿಲ್ಲವೆಂದಾದರೆ, ಈ ಸಂಗತಿಗಳನ್ನು ಗಳಿಸಲು ಬಯಸುವುದು ವ್ಯರ್ಥವಾಗಿದೆ. ಆದ್ದರಿಂದ ಬಹಳ ಆಳವಾಗಿ ಅವಲೋಕನ ನಡೆಸಬೇಕಾದ ಮತ್ತು ತಮ್ಮ ಸತ್ಕರ್ಮಗಳನ್ನು ನಿರಂತರವಾಗಿ ಅಲ್ಲಾಹನ ಸಂಪ್ರೀತಿಗಾಗಿ ಮಾಡುವ ಆವಶ್ಯಕತೆಯಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸತ್ಕರ್ಮಗಳನ್ನು ಮಾಡಲಿಕ್ಕಿರುವ ನಿಬಂಧನೆ ನಿಷ್ಠೆಯಾಗಿದೆ. ಆದ್ದರಿಂದ ಅಲ್ಲಾಹನು ನುಡಿಯುತ್ತಾನೆ **ಮುಖ್ಲಿಸೀನ ಲಹುದ್ದೀನ್**– ಇದು ದೇವದಾಸರಲ್ಲಿ ಇರುತ್ತದೆ." ಮುಂದೆ ಹೇಳುತ್ತಾರೆ: "......ಆದ್ದರಿಂದ ಯಾರು ಅಲ್ಲಾಹನದ್ದಾಗುತ್ತಾನೋ ಅಲ್ಲಾಹನು ಅವನದ್ದಾಗುತ್ತಾನೆ ಎಂದು ನೆನಪಿಡಿ."

(ಮಲ್‌ಫೂಝಾತ, ಸಂಪುಟ–8, ಪುಟ–354–355, ಆವೃತಿ 1984)

ಆದ್ದರಿಂದ ಈ ಉಪಾಯವನ್ನು ಮಾಡಬೇಕಾದ ಆವಶ್ಯಕತೆಯಿದೆ. ಸ್ವತಃ ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸದೇ ಅಲ್ಲಾಹನು ನಮ್ಮ ದುಆಗಳನ್ನು ಸ್ವೀಕಾರ ಮಾಡುವುದಿಲ್ಲವೆಂದು ಕೆಲವರು ದೂರುತ್ತಾರೆ. ನಾವು ಎಷ್ಟರ ಮಟ್ಟಿಗೆ ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುತ್ತೇವೆಂದು ನೋಡಬೇಕಾಗಿದೆ. ಅಲ್ಲಾಹನಂತು ಬಹಳ ದಯಾಳು ಆಗಿದ್ದಾನೆ. ನಮ್ಮಲ್ಲಿ ತಪ್ಪುಗಳಿದ್ದೂ ದಯಪಾಲಿಸುತ್ತಾನೆ. ನಾವು ಹೇಗೆ ಅಲ್ಲಾಹನಗೆ ಸಲ್ಲಬೇಕಾದ ಕರ್ತವ್ಯಗಳನ್ನು ಈಡೇರಿಸಬೇಕು ಎಂಬುದರ ಬಗ್ಗೆ ಅವಲೋಕನ ನಡೆಸಬೇಕು. ಅವನ ಆರಾಧನೆಗೆ ಸಂಬಂಧಿಸಿದ

ಕರ್ತವ್ಯಗಳನ್ನು ಈಡೇರಿಸುವುದೇ ಅತ್ಯಂತ ಮುಖ್ಯವಾದ ಹಕ್ಕಾಗಿದೆ. ಮಸೀದಿಗಳನ್ನು ನಿರ್ಮಿಸಿ ಅದರ ಹಕ್ಕುಗಳನ್ನು ಈಡೇರಿಸಿರಿ. ನಿಷ್ಠಾವಂತರಾಗಿ ಅದರಲ್ಲಿ ಆರಾಧನೆಗಾಗಿ ಬನ್ನಿರಿ.

ಸ್ಥಿರವಾಗಿ ಗಮನಕೊಟ್ಟು ತಮ್ಮ ನಮಾಝ್‌ಗಳ ಸಂರಕ್ಷಣೆ ಮಾಡಬೇಕಾಗುವುದು. ಅಲ್ಲಾಹನೊಂದಿಗೆ ಪ್ರೀತಿಯಿದ್ದರೆ ಮಾತ್ರ ಇದು ಸಾಧ್ಯವಾಗುವುದು. ಬೇರೆ ಯಾರೊಂದಿಗೂ ಇಲ್ಲದಂತಹ ವೈಯಕ್ತಿಕ ಸ್ನೇಹ ಅವನೊಡನೆ ಇರಬೇಕು. ಒಂದು ಪರಿವರ್ತನೆಯನ್ನು ತರುವಂತಹ ಪ್ರೇಮವಾಗಿರಬೇಕು.

ಯಾರು ಅಲ್ಪವಾದ ದುಆದ ನಂತರ ಆಯಾಸಗೊಂಡು ಅಲ್ಲಾಹನ ಜೊತೆಗೆ ಸಂಬಂಧವಿರಿಸಲು ಬಯಸುತ್ತಾರೋ ಅವರು ಈ ಸಂಗತಿಗಳ ಬಗ್ಗೆ ಯೋಚಿಸಬೇಕಾಗಿದೆ.

ಆದ್ದರಿಂದ ಆವಶ್ಯಕತೆ ಬರುವಾಗ ಮಾತ್ರ ಅಲ್ಲಾಹನಲ್ಲಿ ಬೇಡಲು ಹೋಗಬೇಡಿರಿ. ಬದಲಾಗಿ ಅಲ್ಲಾಹನೊಂದಿಗೆ ವೈಯಕ್ತಿಕ ಸಂಬಂಧವನ್ನು ಇರಿಸಿರಿ. ಹಾಗಾದರೆ, ಅಂತಹ ವ್ಯಕ್ತಿಯನ್ನು ಅಲ್ಲಾಹನು ಪ್ರೀತಿಸುತ್ತಾನೆ. ಅವನ ಪ್ರವಾದಿಯ ಆದೇಶಗಳನ್ನು ಪರಿಪೂರ್ಣವಾಗಿ ಪಾಲಿಸಿರಿ. ಅಲ್ಲಾಹನ ಪ್ರವಾದಿಯನ್ನು ಪ್ರೀತಿಸುವುದು ಕೂಡ ಅವಶ್ಯ. ಪ್ರೀತಿಯಿಂದ ಅನುಸರಣೆ ಮಾಡಿರಿ. ಈ ಎರಡು ಪ್ರೇಮಗಳ ಮಿಲನವಾಗುವಾಗ ಮನುಷ್ಯನ ಊಹೆಗೂ ಮಿಗಿಲಾದ ರೀತಿಯಲ್ಲಿ ಅಲ್ಲಾಹನ ಅನುಗ್ರಹಗಳ ಮಳೆ ವರ್ಷಿಸುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: **"ವಮಾ ಖ಼ಲಖ್ತುಲ್ ಜಿನ್ನ ವಲ್ ಇನ್ಸ ಇಲ್ಲಾ ಲಿಯಅ್‌ಬದೂನ್"** ಎಂದು ಅಲ್ಲಾಹನು ಹೇಳಿದಂತೆ ಮನುಷ್ಯನನ್ನು ಅಲ್ಲಾಹನಿಗಾಗಿಯೇ ಸೃಷ್ಟಿಸಲಾಗಿದೆ. ಆದ್ದರಿಂದ ಅಲ್ಲಾಹನು ಅವನ ಸೃಷ್ಟಿಯಲ್ಲೇ ತನಗಾಗಿ ಸ್ವಲ್ಪ ಸಂಗತಿಯನ್ನು ಇರಿಸಿದ್ದಾನೆ. ರಹಸ್ಯವಾದ ಸಂಗತಿಗಳಿಂದ ಮನುಷ್ಯನನ್ನು ಅವನಿಗಾಗಿಯೇ ಮಾಡಿದ್ದಾನೆ. ಅವನ ಆರಾಧನೆ ಮಾಡಲಿಕ್ಕಾಗಿಯೇ ದೇವನು ನಮ್ಮನ್ನು ಸೃಷ್ಟಿಸಿರುವನು ಎಂದು ಇದರಿಂದ ಗೊತ್ತಾಗುತ್ತದೆ. ಯಾರು ತನ್ನ ಹುಟ್ಟಿನ ನಿಜವಾದ ಉದ್ದೇಶವನ್ನು ಬಿಟ್ಟುಕೊಂಡು ಜಾನುವಾರುಗಳ ಹಾಗೆ ತಿನ್ನುವುದು, ಕುಡಿಯುವುದು ಮತ್ತು ನಿದ್ದೆ ಮಾಡುವುದನ್ನೇ ಜೀವಿತವೆಂದು ಭಾವಿಸುತ್ತಾರೋ ಅವರು ದೇವನಿಂದ ದೂರ ಹೋಗುವವರು. ಆರಾಧನೆಯನ್ನು ತನ್ನ ಗುರಿ ಮತ್ತು ಉದ್ದೇಶವನ್ನಾಗಿ ಮಾಡುವುದೇ ಹೊಣೆಗಾರಿಕೆಯ ಜೀವಿತವಾಗಿದೆ. ಮರಣದ ಬಗ್ಗೆ ಯಾವುದೇ ಖಾತರಿಯಿಲ್ಲ. ನೀವು ಅವನನ್ನು ಆರಾಧಿಸಬೇಕು ಮತ್ತು ಅವನದ್ದಾಗಬೇಕು ಎಂಬುದಾಗಿದೆ ನಿಮ್ಮ ಸೃಷ್ಟಿಯ ಉದ್ದೇಶವಾಗಿರಬೇಕು ಎಂಬ ಸಂಗತಿಯನ್ನು ಅರಿಯಿರಿ. ಭೌತಿಕತೆ ನಿಮ್ಮ ಪರಮ ಲಕ್ಷ್ಯವಾಗದಿರಲಿ.

ನೀವು ಲೋಕದ ವ್ಯಾಪಾರವನ್ನು ಬಿಟ್ಟುಕೊಂಡು, ಪತ್ನಿ ಮಕ್ಕಳಿಂದ ಬೇರ್ಪಟ್ಟು ಕಾಡು ಅಥವಾ ಪರ್ವತಕ್ಕೆ ಹೋಗಿ ಕುಳಿತುಕೊಳ್ಳಬೇಕೆಂದು ನಾನು ಬಯಸುವುದಿಲ್ಲ. ಸನ್ಯಾಸವನ್ನು ಮಾಡಲು ಇಸ್ಲಾಂ ಬಯಸುವುದಿಲ್ಲ. ಇಸ್ಲಾಂ ಮನುಷ್ಯನನ್ನು ಚುರುಕುಗೊಳಿಸಲು ಬಯಸುತ್ತದೆ. ಆದ್ದರಿಂದ ನೀವು ನಿಮ್ಮ ವ್ಯಾಪಾರಗಳನ್ನು ಪರಿಶ್ರಮದಿಂದ ಮಾಡಿರಿ. ಯಾವನ ಬಳಿ ಭೂಸ್ವತ್ತು ಇದ್ದು ಅದನ್ನು ನೋಡುವುದಿಲ್ಲವಾದರೆ, ಅದರ ಬಗ್ಗೆ ಅಲ್ಲಾಹನಿಂದ ಪ್ರಶ್ನಿಸಲಾಗುವುದು ಎಂದು ಹದೀಸಿನಲ್ಲಿ ಹೇಳಲಾಗಿದೆ. ನೀವು ಮಾಡುತ್ತಿರುವ ವ್ಯಾಪಾರಗಳನ್ನೆಲ್ಲ ಮಾಡಿರಿ. ಆದರೆ ನೀವು ಮಾಡುತ್ತಿರುವ ಎಲ್ಲ ಕೆಲಸಗಳಲ್ಲಿ ಅಲ್ಲಾಹನ ಸಂಪ್ರೀತಿ ನಿಮ್ಮ ಗುರಿಯಾಗಿರಬೇಕು. ಹೊರಗೆ ಹೋಗಿ ನಿಮ್ಮ ವೈಯಕ್ತಿಕ ಉದ್ದೇಶ ಮತ್ತು ಆಸೆಗಳಿಗೆ ಆದ್ಯತೆ ನೀಡಬೇಡಿರಿ.
(ಮಲ್‌ಫೂಝಾತ್, ಸಂಪುಟ–1, ಪುಟ–181–184, 1984)

ಇದು ಬಹಳವಾಗಿ ಯೋಚಿಸಬೇಕಾದ ಮತ್ತು ಗಮನಿಸಬೇಕಾದ ಸಂಗತಿಯಾಗಿದೆ. ನಾವು ಹಝ್ರತ್ ಮಸೀಹ್ ಮೌಊದ್[ಅ]ರನ್ನು ಬೈಅತ್ ಮಾಡಿದ್ದೇವೆ ಎಂದು ವಾದಿಸಿಕೊಂಡು ನಮ್ಮ ಜೀವಿತೋದ್ದೇಶವನ್ನು ಮರೆತು ಬಿಡುವುದಾದರೆ ನಮ್ಮ ಬೈಅತ್ ಪ್ರಯೋಜನರಹಿತವಾಗಿದೆ. ನಮ್ಮ ಮಾತುಗಳು ಪೊಳ್ಳಾಗಿವೆ. ಆದ್ದರಿಂದ ಪ್ರತಿಯೊಬ್ಬ ಅಹ್ಮದಿಯು ಬಹಳವಾಗಿ ಚಿಂತಿಸಬೇಕು. ಯೋಚಿಸಿರಿ, ಆತ್ಮಾವಲೋಕನ ನಡೆಸಿರಿ ಮತ್ತು ಪೂರ್ತಿ ದಿನದಲ್ಲಿ ಎಷ್ಟು ನಿಮಿಷಗಳು ಆರಾಧನೆಗಾಗಿ ಮುಡಿಪಾಗಿಡುತ್ತೀರಿ ಎಂದು ನೋಡಿರಿ. ತಮ್ಮ ಜೀವಿತೋದ್ದೇಶವನ್ನು ಮರೆಯಬೇಡಿರಿ. ನಾವು ಈ ಸಂಗತಿಗಳನ್ನು ಮರೆತುಬಿಡುವುದಾದರೆ ನಮ್ಮ ಬೈಅತ್ ವ್ಯರ್ಥವಾಗುತ್ತದೆ.

ಅಲ್ಲಾಹನು ನಮ್ಮನ್ನು ಲೌಕಿಕವಾದ ಕೆಲಸಗಳಿಂದ ತಡೆಯುವುದಿಲ್ಲ. ಬದಲಾಗಿ ತಮ್ಮ ವ್ಯಾಪಾರದಲ್ಲಿ, ತಮ್ಮ ಕೃಷಿಕೆಲಸಗಳಲ್ಲಿ ಉನ್ನತ ಮಟ್ಟವನ್ನು ತಲುಪಲು ಹೇಳುತ್ತದೆ. ಆದರೆ ಲೌಕಿಕವಾದ ಕೆಲಸದೊಂದಿಗೆ ಹುಟ್ಟಿನ ಉದ್ದೇಶವನ್ನು ಮರೆಯಬಾರದು. ತಮ್ಮ ನಮಾಝ್‌ಗಳ ಸಂರಕ್ಷಣೆ ಮಾಡಬೇಕು. ಮಸೀದಿ ನಿರ್ಮಿಸಿ ಅದರ ಬಾಹ್ಯವಾದ ಸೌಂದರ್ಯದ ಬಗ್ಗೆ ಜಂಬಕೊಚ್ಚಬೇಡಿರಿ. ಬದಲಾಗಿ ಆರಾಧನೆ ಮಾಡುವವರಿಂದ ಉಂಟಾಗುವ ಯಥಾರ್ಥ ಸೌಂದರ್ಯದ ಬಗ್ಗೆ ಗಮನವಹಿಸಬೇಕು. ತಖ್ವದ ಮಾರ್ಗದಲ್ಲಿ ಹೆಜ್ಜೆ ಇಡಿರಿ ಮತ್ತು ತಖ್ವಾದ ಉನ್ನತ ಮಟ್ಟವನ್ನು ಗಳಿಸಲು ಪ್ರಯತ್ನಿಸಿರಿ. ಇದು ಆಗುವಾಗ ನೀವು ನೈಜವಾದ ಆರಾಧಕರೆಂದು ಕರೆಯಲ್ಪಡುವಿರಿ. ಯಥಾರ್ಥ ಆರಾಧಕರು ಬಾಹ್ಯ ಮತ್ತು ಆಂತರಿಕ ಶುಚಿಯನ್ನು ಕೂಡ ಮಾಡಬೇಕು. ಆದ್ದರಿಂದ ನಮಾಝ್ ಮಾಡುವವರು ತಮ್ಮ ಬಟ್ಟೆಗಳನ್ನು ಕೂಡ ಸ್ವಚ್ಛವಾಗಿರಿಸಬೇಕು. ಪ್ರತಿಯೊಂದು ನಮಾಝಿಗೆ ಮೊದಲು ವುಝೂ಼ ಮಾಡಬೇಕು. ಏಕೆಂದರೆ, ಬಾಹ್ಯವಾದ ಶುಚಿಯಿಂದ ಮನುಷ್ಯನ ಅಂತರಂಗದಲ್ಲೂ ಪ್ರಭಾವ ಉಂಟಾಗುತ್ತದೆ. ಅದಲ್ಲದೇ ವುಝೂ಼ವಿನಿಂದ ಮನುಷ್ಯನಿಗೆ ತಾಜಾತನ ಬರುತ್ತದೆ. ನಮಾಝಿನ ಕಡೆಗೆ ಸರಿಯಾದ ಗಮನ ಉಂಟಾಗುತ್ತದೆ.

ನಮಾಝಿನ ಆಜ್ಞೆಯ ಜೊತೆಗೆ ತಿನ್ನಲು ಕುಡಿಯಲು ಆದರೆ ಮಿತಿಮೀರದಿರಲು ಆದೇಶಿಸಲಾಗಿದೆ. ಒಬ್ಬ ಸತ್ಯವಿಶ್ವಾಸಿ ಆಹಾರ ಪಾನೀಯದಲ್ಲಿ ಮಿತಿಮೀರುವುದಿಲ್ಲ. ಅದರಿಂದ ಅವನ ಆರೋಗ್ಯ ಸರಿಯಾಗಿರುತ್ತದೆ. ಆರಾಧನೆ ಕೂಡ ಸರಿಯಾದ ರೀತಿಯಲ್ಲಿ ಮಾಡುತ್ತಾನೆ. ಒಬ್ಬ ನೈಜ ಆರಾಧಕ ಲೌಕಿಕವಾದ ಕೆಲಸಗಳನ್ನು ಕೂಡ ಮಾಡುತ್ತಾನೆ. ಆದರೆ ನಮಾಝಿನ ಸಮಯ ಆದರೂ ಕೂಡ ನಮಾಝ್ ನಿರ್ವಹಿಸಬೇಕೆಂದು ಅರಿಯದ ರೀತಿಯಲ್ಲಿ ಅದರಲ್ಲಿ ಮುಳುಗುವುದಿಲ್ಲ. ಬದಲಾಗಿ ನಮಾಝಿನ ಸಮಯದಲ್ಲಿ ಬೇಗನೇ ಅದರ ನೆನಪು ಬರಬೇಕು. ಈಗ ನನ್ನ ಲೌಕಿಕ ಕೆಲಸಗಳ ಸಮಯ ಮುಗಿಯಿತು ಮತ್ತು ಈಗ ನಾನು ಅಲ್ಲಾಹನ ಮುಂದೆ ಹಾಜರಾಗಬೇಕೆಂಬ ಕಾಳಜಿ ಇರಬೇಕು. ನಮಾಝನ್ನು ಅಲ್ಲಾಹನಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುತ್ತಾ ನಿರ್ವಹಿಸಬೇಕು. ಬೇಗಬೇಗನೇ ನಮಾಝನ್ನು ನಿರ್ವಹಿಸುವುದಲ್ಲ. ಬದಲಾಗಿ ಸಮಾಧಾನಚಿತ್ತವಾಗಿ ಅನುಷ್ಠಿಸಬೇಕು. ತನ್ನ ಬಾಹ್ಯವಾದ ಶುಚಿ ಮತ್ತು ಸೌಂದರ್ಯದೊಂದಿಗೆ ತಮ್ಮ ಹೃದಯವನ್ನು ಕೂಡ ತಖ್ವದ ಸೌಂದರ್ಯದಿಂದ ತುಂಬಿಸಬೇಕು.

ನಿಸ್ಸಂಶಯವಾಗಿಯೂ ನಿಮಗೆ ಆಹಾರ ಪಾನೀಯದ ಸೇವನೆಯ ಅನುಮತಿಯಿದೆ ಎಂದು ಅಲ್ಲಾಹನು ಹೇಳುತ್ತಾನೆ. ಪ್ರತಿಯೊಂದು ಪರಿಶುದ್ಧ ಆಹಾರಗಳನ್ನು ನಿಮಗಾಗಿ ತಯಾರಿಸಲಾಗಿದೆ. ವ್ಯಾಪಾರ ಮತ್ತು ಲೌಕಿಕವಾದ ಕೆಲಸಗಳನ್ನು ಮಾಡುವುದು ಅನುಮತನೀಯವಾಗಿದೆ. ಆದರೆ ಅವುಗಳು ನಿಮ್ಮನ್ನು ಅಲ್ಲಾಹನ ಆರಾಧನೆ ಮಾಡುವುದರಿಂದ, ಮಸೀದಿಗೆ ಹೋಗುವುದರಿಂದ ತಡೆಯುವುದಾದರೆ, ಆರಾಧನೆಯನ್ನು ಮರೆತುಬಿಡುವಂತೆ ಮಾಡುವುದಾದರೆ, ಅದು ಅತಿರೇಕವಾಗಿದೆ. ಅಲ್ಲಾಹನು ಮಿತಿಮೀರುವುದನ್ನು ಇಷ್ಟಪಡುವುದಿಲ್ಲ. ಐದು ಹೊತ್ತಿನ ನಮಾಝನ್ನು ಏಕೆ ಕಡ್ಡಾಯಗೊಳಿಸಲಾಗಿದೆ. ಇಂದಿನ ಕಾಲದಲ್ಲಿ ಇದು ಕಷ್ಟದ ಕೆಲಸವಾಗಿದೆ ಎಂದು ಜನರು ಹೇಳುತ್ತಾರೆ. ಕೆಲಸದಿಂದ ಬಿಡುವು ಪಡೆದು ಹೇಗೆ ಐದು ಹೊತ್ತಿನ ನಮಾಝನ್ನು ನಿರ್ವಹಿಸುವುದು ಎಂದು ಕೇಳುತ್ತಾರೆ. ಇದು ಕಷ್ಟವಲ್ಲ ಎಂದು ಅಲ್ಲಾಹನು ಹೇಳುತ್ತಾನೆ. ಕೇವಲ ಲೌಕಿಕವಾದ ಚಿಂತೆ ಇರುವುದು ಮತ್ತು ದೇವನನ್ನು ಮರೆತುಬಿಡುವುದು ಅತಿರೇಕವಾಗಿದೆ. ಇಂದಿನ ಈ ನವಯುಗದಲ್ಲಿ ಐದು ಹೊತ್ತಿನ ನಮಾಝ್‌ಗಳನ್ನು ನಿರ್ವಹಿಸದೇ ಇರಲು ಹೇಳುವ ನೆಪಗಳು ಅತಿರೇಕದ್ದಾಗಿವೆ. ಈ ಅತಿರೇಕವು ಅಲ್ಲಾಹನಿಂದ ದೂರ ಮಾಡುವುದು. ಈ ರೀತಿಯಲ್ಲಿ ಮುಸ್ಲಿಂ ಮತ್ತು ಅಹ್ಮದಿಯೆಂದು ವಾದಿಸುವುದು ಕೇವಲ ಬಾಯಿಮಾತಿನ ವಾದವಾಗಿ ಉಳಿಯುವುದು. ನಡತೆಯಲ್ಲಿ ಅದು ಇರದು. ಯಥಾರ್ಥ ಸತ್ಯವಿಶ್ವಾಸಿಯು ಧರ್ಮಕ್ಕೆ ಭೌತಿಕತೆಗಿಂತ ಪ್ರಾಮುಖ್ಯತೆ ನೀಡುವನು. ಸತ್ಯದಲ್ಲಿ ಮನುಷ್ಯನು ಧರ್ಮಕ್ಕೆ ಲೌಕಿಕತೆಗಿಂತ ಆದ್ಯತೆ ನೀಡುವಾಗ ಅಲ್ಲಾಹನು ಅವನ ಜೀವನಾಧಾರದ ಹೊಸ ಹೊಸ ಮಾರ್ಗಗಳನ್ನು ತೆರೆಯುತ್ತಾನೆ. ಅವನ ಕೆಲಸಗಳನ್ನು ಅನುಗ್ರಹಿಸುತ್ತಾನೆ. ಆದ್ದರಿಂದ ಅಲ್ಲಾಹನ ಆಜ್ಞೆಗಳ ಪ್ರಕಾರ ನಡೆಯಿರಿ, ತಮ್ಮ ಜೀವಿತವನ್ನು ಅಲ್ಲಾಹನ ಆಜ್ಞೆಗಳ ಪ್ರಕಾರ ಮಾಡಿರಿ, ತಮ್ಮ ಆರಾಧನೆಯ ಉನ್ನತ ಮಟ್ಟವನ್ನು ಗಳಿಸಲು ಪ್ರಯತ್ನಿಸಿರಿ. ಅಲ್ಲಾಹನ ಅನುಗ್ರಹದಿಂದ ಲೋಕದ ಆವಶ್ಯಕತೆಗಳ ಪೂರೈಕೆಯಾಗುತ್ತದೆ.

ಯಾವನು ಹೀಗೆ ಮಾಡುವುದಿಲ್ಲವೋ ಅವನನ್ನು ಲೌಕಿಕ ಬಯಕೆಗಳ ಬೆಂಕಿ ಸ್ಪರ್ಶಿಸುತ್ತದೆ. ಅದು ನಂದಿಹೋಗುವುದಿಲ್ಲ ಮತ್ತು ಮನುಷ್ಯನನ್ನು ಭಸ್ಮ ಮಾಡಿ ಬಿಡುತ್ತದೆ. ಅಲ್ಲಾಹನಲ್ಲಿ ಮತ್ತು ಪರಲೋಕದಲ್ಲಿ ವಿಶ್ವಾಸವಿಡುವವರು ಅಲ್ಲಾಹನ ಮಸೀದಿಯನ್ನು ತುಂಬಿಸುತ್ತಾರೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿರುವರು. (ಸುನನ್ ಅತ್ತಿರ್ಮಿಝಿ, ಅಬ್ವಾಬುಝ್ಝುಹದ್, ಹದೀಸ್–2391, ಅಬ್ವಾಬುಲ್ ಈಮಾನ್ ಹದೀಸ್–2617)

ಆದ್ದರಿಂದ ನಾವು ಮಸೀದಿಗಳನ್ನು ತುಂಬಿಸುವ ಸತ್ಯವಿಶ್ವಾಸಿಗಳಾಗಬೇಕು. ಒಂದು ನಮಾಝಿನ ನಂತರ ಮತ್ತೊಂದು ನಮಾಝನ್ನು ನಿರ್ವಹಿಸುವ ಪ್ರತೀಕ್ಷೆಯಲ್ಲಿ ಇರುವುದು ಮಸೀದಿಯನ್ನು ತುಂಬಿಸುವವರ ಲಕ್ಷಣವಾಗಿದೆ. ಆದ್ದರಿಂದ ಮಸೀದಿಯನ್ನು ನಿರ್ಮಿಸಿದ

ನಂತರ ಅದನ್ನು ಜನನಿಬಿಡಗೊಳಿಸಬೇಕು. ಇದೇ ವಿಧಾನದಿಂದಲೇ ಅಲ್ಲಾಹನ ಕೃಪೆ ಸೆಳೆಯಲ್ಪಡುತ್ತದೆ. ಇದೇ ನಿಮ್ಮ ಮತ್ತು ನಿಮ್ಮ ಸಂತಾನಗಳ ತರಬೇತಿಯ ಮಾರ್ಗವಾಗಿದೆ. ಇಲ್ಲದಿದ್ದರೆ ಈಗಿನ ಕಾಲದ ಹೊಳಪಿನಿಂದ ನಮ್ಮ ಸಂತಾನಗಳು ಧರ್ಮದಿಂದ ದೂರಹೋಗಬಹುದು. ಚಿಕ್ಕಂದಿನಿಂದಲೇ ಅವರನ್ನು ಮಸೀದಿಯೊಂದಿಗೆ ಜೋಡಿಸುವುದು ಮತ್ತು ಧರ್ಮದ ಪ್ರಾಮುಖ್ಯತೆ ಬಗ್ಗೆ ಹೇಳಕೊಡಬೇಕಾದ ಆವಶ್ಯಕತೆಯಿದೆ. ಇದು ತಂದೆತಾಯಂದಿರ ಕೆಲಸವಾಗಿದೆ.

ಈ ಮಸೀದಿಯ ಉದ್ಘಾಟನೆಯಿಂದ ಈಗ ಇನ್ನಷ್ಟು ಮಾರ್ಗಗಳು ತೆರೆಯಲ್ಪಡುವುವು. ಅವುಗಳನ್ನು ಪೂರ್ಣವಾಗಿ ಉಪಯೋಗಿಸಿಕೊಂಡು ಈ ಮಸೀದಿಯನ್ನು ಜನನಿಬಿಡಗೊಳಿಸಲಿಕ್ಕಾಗಿ ಜನರಿಗೆ ಇಸ್ಲಾಂ ಅಹ್ಮದಿಯ್ಯತ್ತಿನ ಸಂದೇಶವನ್ನು ನೀಡಿರಿ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈಗ ನಮ್ಮ ಜಮಾಅತಿಗೆ ಮಸೀದಿಗಳ ಬಹಳ ಆವಶ್ಯಕತೆಯಿದೆ. ಇದು ಅಲ್ಲಾಹನ ಭವನವಾಗಿದೆ. ಯಾವ ಗ್ರಾಮ ಅಥವಾ ಪಟ್ಟಣದಲ್ಲಿ ಮಸೀದಿಯ ನಿರ್ಮಾಣವಾಗುತ್ತದೋ ಅಲ್ಲಿ ಇಸ್ಲಾಮಿನ ಬುನಾದಿ ಹಾಕಿದಂತೆ. ಆದರೆ ಮಸೀದಿಯ ನಿರ್ಮಾಣದಲ್ಲಿ ನಿಷ್ಠೆಯಿರಬೇಕು. ಅಲ್ಲಾಹನಿಗಾಗಿ ಮಾಡಿರಬೇಕು ಎಂಬುದಾಗಿದೆ ಇದಕ್ಕಿರುವ ನಿಬಂಧನೆ." (ಮಲ್‌ಫೂಝಾತ್, ಸಂಪುಟ–7, ಪುಟ–119, 1984)

ಹಝ್ರತ್ ಮಸೀಹ್ ಮೌಊದ್(ಅ) ಹೇಳಿದಂತೆ ಮಸೀದಿಯಿಂದ ಜಮಾಅತಿನ ಪ್ರಗತಿಯ ಬುನಾದಿ ಉಂಟಾಗಿದೆ. ಇಲ್ಲಿ ಅಹ್ಮದಿಯರ ಪ್ರಯತ್ನಗಳು, ನಿಷ್ಠೆ, ಆರಾಧನೆಯ ಉನ್ನತ ಮಟ್ಟ ಉಂಟಾದರೆ, ಇಲ್ಲೂ ಜಮಾಅತಿನ ಪ್ರಗತಿಯ ಬುನಾದಿ ಉಂಟಾಗಿದೆ ಎಂದು ಅರಿಯಿರಿ. ಇನ್‌ಶಾ ಅಲ್ಲಾಹ್. ಆದ್ದರಿಂದ ತಮ್ಮ ಆರಾಧನೆಗಳ ಮತ್ತು ನಿಷ್ಠೆಯ ಮಟ್ಟವನ್ನು ವರ್ಧಿಸುತ್ತಾ ಹೋಗಿರಿ. ತಮ್ಮ ಮಕ್ಕಳಲ್ಲೂ ಈ ನಿಷ್ಠೆ, ದುಆದ ಪ್ರಾಮುಖ್ಯ ಮತ್ತು ಆರಾಧನೆಯ ಪ್ರಾಧಾನ್ಯ ಉಂಟಾಗುವಂತೆ ಮಾಡಿರಿ. ಆಗ ಈ ಲೌಕಿಕ ಪ್ರೇಮಿಗಳಲ್ಲೂ ನಾವು ಒಂದು ಪರಿವರ್ತನೆಯನ್ನು ಕಾಣುವೆವು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮಸೀದಿಯ ನೈಜ ಸೌಂದರ್ಯ ಅದರ ಕಟ್ಟಡದಲ್ಲಲ್ಲ. ಬದಲಾಗಿ ನಿಷ್ಠೆಯಿಂದ ನಮಾಝ್ ಮಾಡುವವರಿಂದಾಗಿದೆ. (ಮಲ್‌ಫೂಝಾತ್, ಸಂಪುಟ–8, ಪುಟ–170, 1984)

ನಿಷ್ಠೆಯಿಂದ ನಮಾಝ್ ಮಾಡಲು ಮತ್ತು ಮಸೀದಿಯನ್ನು ಜನನಿಬಿಡಗೊಳಿಸಲು ಅಲ್ಲಾಹನು ಎಲ್ಲರಿಗೂ ಸೌಭಾಗ್ಯ ನೀಡಲಿ. ಅಲ್ಲಾಹನು ನಮ್ಮ ದುಆಗಳನ್ನು ಮತ್ತು ಆರಾಧನೆಗಳನ್ನು ಸ್ವೀಕಾರ ಮಾಡಲಿ. ಆಮೀನ್.

*****************

## ಅಂತಿಮ ವಿಜಯ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು. **(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖಝಾಇನ್ ಸಂಪುಟ 21, ಪುಟ 427)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಬಂದ 38 ಕುಟುಂಬಗಳ 149 ಜನರು ತನ್ನ ಪ್ರೀತಿಯ ಇಮಾಮರೊಂದಿಗೆ ಭೇಟಿಯ ಭಾಗ್ಯ ಪಡೆದರು. ಈ ಭೇಟಿ ಮಾಡಿದ ಕುಟುಂಬಗಳು ಹುಝೂರೆ ಅನ್ವರ್ ಅವರಲ್ಲಿ ತನ್ನ ಸಮಸ್ಯೆಗಳನ್ನು ಮತ್ತು ಸಂಕಷ್ಟಗಳನ್ನು ತಿಳಿಸಿ ದುಆಕ್ಕಾಗಿ ಯಾಚಿಸಿದರು ಮತ್ತು ಅವರಿಂದ ಮಾರ್ಗದರ್ಶನ ಪಡೆದರು. ಬಾಲಕ ಬಾಲಕಿಯರು ತಮ್ಮ ಶಿಕ್ಷಣದ ಉನ್ನತ ಫಲಿತಾಂಶಕ್ಕಾಗಿ ತನ್ನ ಪ್ರೀತಿಯ ಇಮಾಮರಿಂದ ದುಆ ಯಾಚಿಸಿದರು. ವಿದ್ಯಾರ್ಥಿ ವಿಧ್ಯಾರ್ಥಿನಿಯರಿಗೆ ಹುಝೂರೆ ಅನ್ವರ್ ಪ್ರೀತಿಯಿಂದ ಲೇಖನಿ (ಪೆನ್) ಮತ್ತು ಸಣ್ಣ ಮಕ್ಕಳಿಗೆ ಚಾಕ್ಲೇಟ್‌ಗಳನ್ನು ನೀಡಿದರು. ಇವೆಲ್ಲಾ ಕುಟುಂಬಗಳು ತನ್ನ ಪ್ರೀತಿಯ ಇಮಾಮರೊಂದಿಗೆ ಭಾವಚಿತ್ರ ತೆಗೆಸಿಕೊಳ್ಳುವ ಭಾಗ್ಯ ಪಡೆದರು. ಭೇಟಿ ಮಾಡಲು ಬಂದ ಈ ಕುಟುಂಬಗಳ ಅವಿಸ್ಮರಣೆಯ ಪ್ರಾರ್ಥನೆಗಳನ್ನು ಪಡೆದು ಕಾರುಣ್ಯಗಳೊಂದಿಗೆ ಇಲ್ಲಿಂದ ತೆರಳಿದರು.

ಭೇಟಿಯ ಈ ಕಾರ್ಯಕ್ರಮ ಎಂಟುವರೆ ಗಂಟೆಗೆ ಮುಕ್ತಾಯವಾಯಿತು. ಅನಂತರ ಹುಝೂರ್ ಮಸ್ಜಿದ್ ಮರಿಯಂ ಆಗಮಿಸಿ ಮಗ್ರಿಬ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ನೆಷ್ನಲ್ ಸದರ್ ಸಾಹಿಬ್ ಐರ್‌ಲ್ಯಾಂಡ್ ಜಮಾಅತ್ ಮುಕರ್ರಮ್ ಡಾ॥ ಅನ್ವರ್ ಮಲಿಕ್ ಸಾಹಿಬ್ ಅವರಿಗೆ ನಿರ್ದೇಶನಗಳನ್ನು ನೀಡುತ್ತಾ ಹೇಳಿದರು. ನಾಳೆ ಜುಮುಅ ಸಂದರ್ಭದಲ್ಲಿ ಜಮಾಅತ್ ಬಾಂಧವರ ಸಂಖ್ಯೆ ಹೆಚ್ಚಾಗಬಹುದು. ಬೇರೆ ದೇಶಗಳಿಂದಲೂ ಜನರು ಬರುತ್ತಿದ್ದಾರೆ. ಆದುದರಿಂದ ಮಸೀದಿಯ ಹತ್ತಿರ ಇರುವ ಲಾಬಿ ಮತ್ತು ಗ್ಯಾಲರಿಗಳೇನಿವೆಯೋ ಅದರಲ್ಲಿಯೂ ಕಿಬ್ಲದ ದಿಕ್ಕನುಸಾರವಾಗಿ ಸಾಲುಗಳನ್ನು ಸೃಷ್ಟಿಸಿ ಅದರಿಂದ ಹೆಚ್ಚು ಜನರು ನಮಾಝ್ ನಿರ್ವಹಿಸಬಹುದು ಮತ್ತು ಸಾಲುಗಳು ಸಹ ನೇರವಾಗಿರಬಹುದು.

ಅನಂತರ ಹುಝೂರೆ ಅನ್ವರ್(ಅತಬಿಅ) ತಮಗೆ ವಸತಿ ಏರ್ಪಡಿಸಿದ್ದ ಹೋಟೆಲ್ Clayton ಆಗಮಿಸಿದರು.

ಹುಝೂರೆ ಅನ್ವರ್(ಅತಬಿಅ) ಅವರ ಪರಿಶುದ್ಧ ವ್ಯಕ್ತಿತ್ವದಿಂದ ತಮ್ಮವರು ಪರರು ಎಲ್ಲರೂ ಅನುಗ್ರಹಿತರಾಗುತ್ತಿದ್ದಾರೆ. "ಮಸ್ಜಿದ್ ಮರಿಯಂ," ಉದ್ಘಾಟನೆಗಾಗಿ ಐರ್‌ಲ್ಯಾಂಡ್‌ಗೆ ಬಂದ ಸುದ್ದಿ ವಾರ್ತಾ ಪತ್ರಿಕೆಗಳಲ್ಲಿ ಮತ್ತು ರೇಡಿಯೋಗಳಲ್ಲಿ ಬಿತ್ತರಿಸಲಾಯಿತು. ಸಂಜೆ ನೆಷ್ನಲ್ ಸದರ್ ಸಾಹಿಬರಿಗೆ ಕೆಥೋಲಿಕ್ ಮಹಿಳೆಯೊಬ್ಬಳು ಇ–ಮೇಲ್ ಮಾಡಿದ್ದಳು. ಅಹ್ಮದಿಯಾ ಜಮಾಅತಿನ ಖಲಿಫರು ಗಾಲ್ವೆ ಐರ್‌ಲ್ಯಾಂಡ್‌ಗೆ ಬಂದ ಸಮಾಚಾರ ನನಗೆ ಸಿಕ್ಕಿದೆ. ಇಂದು ನನ್ನ ಪತಿಗೆ ಶಸ್ತ್ರ ಚಿಕಿತ್ಸೆಯಿದೆ. ತಾವು ನನ್ನ ಪತಿಯ ಆರೋಗ್ಯಕ್ಕಾಗಿ ದುಆ ಮಾಡಲು ಹೇಳಬೇಕು.

ಮಸೀದಿಯ ಧ್ವನಿವರ್ಧಕ ವ್ಯವಸ್ಥೆಗಾಗಿ ಒಂದು ಕಂಪನಿಯ ಮಾಲಿಕರಾದ M.N. Fintan ಹಿಂದಿನ ಐದಾರು ದಿನಗಳಿಂದ ಮಸೀದಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರು ಹುಝೂರೆ ಅನ್ವರ್ ನಮಾಝ್ ನಿರ್ವಹಿಸಿಕೊಡುವುದನ್ನು ಕಂಡಿದ್ದಾರೆ. ಹೇಳುತ್ತಾರೆ ನಾನು ಖಲೀಫತುಲ್ ಮಸೀಹ್ ಅವರನ್ನು ಕಂಡು ತುಂಬಾ ಪ್ರಭಾವಿತನಾಗಿದ್ದೇನೆ. ನಾನು ಕೆಥೋಲಿಕ್ ಆಗಿದ್ದೇನೆ. ಚರ್ಚ್‌ಗೆ ಹೋಗುತ್ತೇನೆ. ಆದರೆ ಇಲ್ಲಿ ಬಂದು ಭಾವಿಸುತ್ತಿದ್ದೇನೆ. ನನ್ನ ಜೀವನದಲ್ಲಿ ಒಂದು ಪರಿವರ್ತನೆ ಆಗುತ್ತಿದೆ. ನನಗೆ ನನ್ನ ಮನಸ್ಸಿನಲ್ಲಿ ಒಂದು ಸಮಾಧಾನ ದೊರೆಯುತ್ತಿದೆ. ಚರ್ಚ್‌ನಲ್ಲಿ ಇಂದಿನವರೆಗೆ ದೇವನು ಸಿಗಲಿಲ್ಲ. ಇಲ್ಲಿ ಯಾವಾಗಿನಿಂದ ಖಲೀಫತುಲ್ ಮಸೀಹ್ ಅವರನ್ನು ಕಾಣುತ್ತಿದ್ದೇನೆ. ನಮಾಝ್ ನಿರ್ವಹಿಸಿ ಕೊಡುವುದನ್ನು ಕಂಡಿದ್ದೇನೆ. ನನಗೆ ಇಲ್ಲಿ ದೇವನು ಕಂಡುಬರುತ್ತಿದ್ದಾನೆ. ನನಗೆ ಇಲ್ಲಿ ದೇವನು ಲಭಿಸಿದ್ದಾನೆ. ನಾನು ಖಲೀಫತುಲ್ ಮಸೀಹರೊಂದಿಗೆ ಸಾಷ್ಟಾಂಗ ಪ್ರಣಾಮ ಮಾಡಿದ್ದೇನೆ ಮತ್ತು ಪ್ರಾರ್ಥನೆ ಮಾಡುತ್ತಿದ್ದೇನೆ.

ಅವರು ಹುಝೂರೆ ಅನ್ವರ್(ಅತಬಿಅ)ರನ್ನು ಭೇಟಿ ಮಾಡಿ ಹೇಳಿದರು. ನಾನು ಖಲೀಫತುಲ್ ಮಸೀಹ್ ಅವರೊಂದಿಗೆ ಭೇಟಿಯಾದ ನಂತರ ತನ್ನೊಳಗೆ ಒಂದು ಪರಿವರ್ತನೆಯನ್ನು ಕಾಣುತ್ತಿದ್ದೇನೆ.

ಅಲ್ಲಾಹನ ಅನುಗ್ರಹದಿಂದ ಹುಝೂರೆ ಅನ್ವರ್ ಅವರ ಈ ಪ್ರವಾಸದಲ್ಲಿ ಹೆಜ್ಜೆ ಹೆಜ್ಜೆಗೂ ಅನುಗ್ರಹಗಳು ಕಾಣುವಂತಾಗಿದೆ. ಮೂಸಾರ ಮಸೀಹರನ್ನು ನಂಬುವರು. ಮುಹಮ್ಮದೀಯ ಮಸೀಹನ ಕಡೆ ವಾಲುತ್ತಿದ್ದಾರೆ ಮತ್ತು ಅವರ ಹೃದಯಗಳು ಇಸ್ಲಾಮಿನತ್ತ ವಾಲುತ್ತಿವೆ.

ಇಂದು ಬೆಳಿಗ್ಗೆ ಐರ್‌ಲ್ಯಾಂಡ್‌ನ ನ್ಯಶ್ನಲ್ ರೇಡಿಯೋ Rte-1 ಮಸೀದಿಯ ಉದ್ಘಾಟನಾ ಪೈಕಿ ನಾಲ್ಕರಿಂದ ಐದು ನಿಮಿಷದ ಒಂದು ಕಾರ್ಯಕ್ರಮ ಬಿತ್ತರಿಸಿತು. ಅದರಲ್ಲಿ ನೆಷ್ನಲ್ ಸದರ್ ಸಾಹಿಬ್ ಐರ್‌ಲ್ಯಾಂಡ್, ಗಾಲ್ವೆ ಜಮಾಅತಿ ಲೋಕಲ್ ಅಧ್ಯಕ್ಷರು ಮತ್ತು ಮುಬಲ್ಲಿಗ್ ಇನ್‌ಚಾರ್ಜ್ ಇಬ್ರಾಹಿಂ ನೋನನ್ ಸಾಹಿಬ್ ಅವರುಗಳು ಮಸೀದಿಯ ಪೈಕಿ ಸಂದರ್ಶನ ಬಿತ್ತರಿಸಿದರು. ಪತ್ರಕರ್ತರು ಈ ಸಂದರ್ಶನ ಬಿತ್ತರಿಸುತ್ತ ಹೇಳಿದರು. ಐರ್‌ಲ್ಯಾಂಡ್‌ನಲ್ಲಿ ಜಮಾಅತಿನ ಸಂಖ್ಯೆ 500 ಸಮೀಪವಿದೆ. ಆದರೆ ಅಹ್ಮದಿಯಾ ಜಮಾಅತಿನ ಈ ಮಸೀದಿ ಎಲ್ಲಾ ಮುಸಲ್ಮಾನರಿಗೆ ಮತ್ತು ಮುಸ್ಲಿಮೇತರಿಗೆ ತೆರೆಯಲ್ಪಡುವುದು. ಅಹ್ಮದಿಯಾ ಜಮಾಅತಿನ ಖಲೀಫರು ಮಸೀದಿಯ ಉದ್ಘಾಟನೆಯ ಸಲುವಾಗಿ ಐರ್‌ಲ್ಯಾಂಡ್‌ಗೆ ಆಗಮಿಸಿದ್ದಾರೆ. ಅವರು ಈ ಮಸೀದಿಯನ್ನು ಉದ್ಘಾಟಿಸುವರು.

**(ಮುಂದುವರಿಯುವುದು)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 03, 10 November 2022, Issue No. 44-45

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್‌ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಐರ್ಲ್ಯಾಂಡ್‌ನ ಪ್ರವಾಸ (ಸೆಪ್ಟೆಂಬರ್ 2014)*

*(ಬದರ್ ಸಂಚಿಕೆ-41ರ ಉಳಿದ ಭಾಗ ಮುಂದುವರಿಸಲಾಗಿದೆ)*

ಇನ್ನೊಂದು ಸಭಾಂಗಣದಲ್ಲಿ ಮೇಲ್ಮನೆಯ ಸಂಸತ್ ಸದಸ್ಯರ ಸಭೆ ಜರುಗಿತ್ತು. ರಕ್ಷಣಾಧಿಕಾರಿ John Flaherty ಹುಝೂರೆ ಅನ್ವರ್ ಅವರನ್ನು ವಿಶೇಷ ವ್ಯವಸ್ಥೆ ಅನ್ವಯ ಆ ಸಭಾಂಗಣಕ್ಕೆ ಕರೆದುಕೊಂಡು ಹೋದನು. ಅಲ್ಲಿ ಹುಝೂರೆ ಅನ್ವರ್ 10 ನಿಮಿಷದವರೆಗೆ ಕಾರ್ಯಕ್ರಮ ವೀಕ್ಷಿಸಿದರು. ಆನಂತರ ಪಾರ್ಲಿಮೆಂಟ್ ಆಯೋಜಕರಿಂದ ಚಹಾ ಮತ್ತು ಇತರೆ ರೀತಿಯ ಸತ್ಕಾರ ನೀಡಿದರು. ಈ ಮಧ್ಯೆ ಹುಝೂರೆ ಅನ್ವರ್ ರಕ್ಷಣಾದಿಕಾರಿಗಳಿಗೆ ಪ್ರೀತಿಪೂರ್ವಕವಾಗಿ ಗಾಲ್ವೆಯಲ್ಲಿ ಮಸೀದಿಯ ಉದ್ಘಾಟನಾ ಸಮಾರಂಭಕ್ಕೆ ಬರಲು ಆಹ್ವಾನಿಸಿದರು.

ಕಾರ್ಯಕ್ರಮದನ್ವಯ 12 ಗಂಟೆ 50 ನಿಮಿಷಕ್ಕೆ ಹುಝೂರೆ ಅನ್ವರ್ ಅವರಿಗೆ ಪೂರ್ಣ ಪ್ರಮಾಣದ ಗೌರವಗಳೊಂದಿಗೆ ಪಾರ್ಲಿಮೆಂಟ್ ಹೌಸ್‌ನಿಂದ ಬೀಳ್ಕೊಟ್ಟರು.

ಪೋಲೀಸರ ನಾಲ್ಕು ವಾಹನಗಳು ಮರಳುವಾಗಲು ತಂಡವನ್ನು Escort ಸೇವೆ ನೀಡಿದರು ಮತ್ತು ಜೊತೆ ಜೊತೆಯಲ್ಲಿ Traffic ನಿಯಂತ್ರಿಸುತ್ತ ದಾರಿಯುದ್ದಕ್ಕೂ ಸುಗಮಗೊಳಿಸಿದರು.

ಒಂದು ಗಂಟೆ ಇಪ್ಪತ್ತು ನಿಮಿಷಕ್ಕೆ ಹುಝೂರೆ ಅನ್ವರ್ ಹೋಟೆಲ್ ಆಗಮಿಸಿದರು.

ಎರಡು ಗಂಟೆಗೆ ಹುಝೂರೆ ಅನ್ವರ್ ಆಗಮಿಸಿ ಝುಹರ್ ಅಸರ್ ನಮಾಝ್ ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರೆ ಅನ್ವರ್ ತಮ್ಮ ವಸತಿ ವಿಭಾಗಕ್ಕೆ ತೆರಳಿದರು.

ಇಂದು ಕಾರ್ಯಕ್ರಮದನ್ವಯ ಡಬ್ಲಿನ್‌ನಿಂದ ಗಾಲ್ವೆ ನಗರಕ್ಕೆ ತೆರಳಬೇಕಿತ್ತು ಮೂರು ಗಂಟೆ 55 ನಿಮಿಷಕ್ಕೆ ಹುಝೂರೆ ಅನ್ವರ್ ಹೋಟೇಲಿನಿಂದ ಹೊರಗೆ ಬಂದರು ಮತ್ತು ಸಾಮೂಹಿಕ ಪ್ರಾರ್ಥನೆ (ದುಆ) ಮಾಡಿದರು ಮತ್ತು ತಂಡವು ಗಾಲ್ವೆಯ ಕಡೆ ಪ್ರಯಾಣಿಸಿತು.

ಗಾಲ್ವೆ ನಗರ ಡಬ್ಲಿನ್‌ನಿಂದ 120 ಕಿಮೀ ಪಶ್ಚಿಮ ದಿಕ್ಕಿನಲ್ಲಿ ಕಡಲ ತೀರದಲ್ಲಿದೆ. ಇದು ಐರ್ಲ್ಯಾಂಡ್‌ನ ನಾಲ್ಕನೆಯ ದೊಡ್ಡ ನಗರವಾಗಿದೆ. ಈ ನಗರದ ಶೋಧನೆ 13ನೇ ಶತಮಾನದಲ್ಲಾಯಿತು. 68 ಸಾವಿರ ಜನರು ಇಲ್ಲಿ ವಾಸಿಸುತ್ತಾರೆ. ಈ ನಗರ ಐರ್ಲ್ಯಾಂಡ್‌ನ ಪಶ್ಚಿಮ ದಂಡೆಯಲ್ಲಿ ಇರುವ ಕಾರಣ ಯೂರೊಪಿನ ಕೊನೆಯ (ಅಂತಿಮ) ನಗರ ಎಂದೂ ಕರೆಯಲಾಗುತ್ತದೆ.

ಸುಮಾರು ಎರಡೂ ಗಂಟೆಯ ಪ್ರಯಾಣದ ನಂತರ ಹುಝೂರೆ ಅನ್ವರ್ ಗಾಲ್ವೆ ತಲುಪಿದರು. ಗಾಲ್ವೆಯಲ್ಲಿ ಹುಝೂರ್ ಮತ್ತು ತಂಡದ ಸದಸ್ಯರಿಗೆ clayton ಹೋಟೆಲ್‌ನಲ್ಲಿ ವ್ಯವಸ್ಥೆ ಮಾಡಿದರು. ಹುಝೂರೆ ಅನ್ವರ್ ವಾಹನದಿಂದ ಹೊರಗೆ ತಲುಪಿದ್ದಂತೆ ಜಮಾಅತಿನ ಸ್ತ್ರೀ ಪುರುಷರಿಗೆಲ್ಲರಿಗೂ ತಮ್ಮ ಕೈ ಬೀಸುತ್ತಾ ಶುಭ ಕೋರಿದರು. ಬಾಲಕ-ಬಾಲಕಿಯರು ತಂಡದ ರೂಪದಲ್ಲಿ ನಿಂತು ಸ್ವಾಗತ ಗೀತೆಗಳನ್ನು ಪ್ರಸ್ತುತಪಡಿಸುತ್ತಿದ್ದರು.

ಗಾಲ್ವೆ ಜಮಾಅತಿನ ಅಧ್ಯಕ್ಷರಾದ ಮುಕರ್ರಮ್ ಡಾ॥ ಮಾಮೂನುರ್ರಶೀದ್ ಸಾಹಿಬ್ ತನ್ನ ಕಾರ್ಯಕಾರಿಣಿ ಸದಸ್ಯರ ಜೊತೆಯಲ್ಲಿ ಹುಝೂರ್‌ರನ್ನು ಸ್ವಾಗತಿಸಿದರು ಮತ್ತು ಹಸ್ತಲಾಘವ ಪಡೆದರು. ಮುಕರ್ರಮ್ ಇಬ್ರಾಹಿಂ ನೋನನ್ ಸಾಹಿಬ್ ಮುಬಲ್ಲಿಗ್ಹ್ ಗಾಲ್ವೆ ಅವರೂ ಸಹ ಹಸ್ತಲಾಘವ ಭಾಗ್ಯ ಪಡೆದರು.

ಸದರ್ ಲಜ್ನ ಇಮಲಾಉಲ್ಲಾಹ್ ಗಾಲ್ವೆ ಮುಕರ್ರಮ್ ಶಾಝಿಯಾ ರಿಜ್ವಾನ್ ಸಾಹಿಬ, ಹಝ್‌ರತ್ ಬೇಗಂ ಸಾಹಿಬ ಅವರನ್ನು ಸ್ವಾಗತಿಸಿದರು. ಗಾಲ್ವೆ ಜಮಾಅತಿನ ಸದಸ್ಯರಲ್ಲದೇ Conk Limenick, Athlone & Dublin ನ ಜಮಾಅತ್ ಬಾಂಧವರು ಸಹ ಆಗಮಿಸಿದ್ದರು. ಅವರಲ್ಲಿ ಕೆಲ ಕುಟುಂಬಗಳು ಹುಝೂರ್‌ರನ್ನು ಪ್ರಥಮ ಬಾರಿ ಸಮೀಪದಿಂದ ನೋಡುವವರಾಗಿದ್ದರು. ಈ ದಿನ ಅವರಿಗೆಲ್ಲ ತುಂಬಾ ಕಾರುಣ್ಯ ಮತ್ತು ಶುಭಕರದ ದಿನವಾಗಿತ್ತು. ಪ್ರತಿಯೊಬ್ಬ ಹಿರಿಯನೂ, ಕಿರಿಯನೂ ಈ ಕ್ಷಣಗಳಿಂದ ಅನುಗ್ರಹಿತರಾಗುತ್ತಿದ್ದರು.

ಆ ಸಂದರ್ಭದಲ್ಲಿ ಹುಝೂರ್ ಅನ್ವರ್ ಅವರ ಸೇವೆಯಲ್ಲಿ ಅಝೀಝುಮ್ ಜಹಾಂಗೀರ್ ರಶೀದ್ ಅವರು ಪುಷ್ಪಗುಚ್ಛವನ್ನು ಅರ್ಪಿಸಿದರು. ಮತ್ತು ಅಝೀಝುಂ ಸಮ್ರಾಖಾನ್ ಹಝುರತ್ ಬೇಗಂ ಸಾಹಿಬ ಅವರ ಜೊತೆಯಲ್ಲಿ ಪುಷ್ಪಗುಚ್ಛ ಅರ್ಪಿಸಿದರು.

ಹುಝೂರೆ ಅನ್ವರ್ ತನ್ನ ಕೈಯನ್ನು ಮೇಲಕ್ಕೆತ್ತಿ ಎಲ್ಲರಿಗೂ ಅಸ್ಸಲಾಂ ಅಲೈಕುಂ ಹೇಳಿದರು. ಮತ್ತು ಹೋಟೆಲಿನ ತಮ್ಮ ವಸತಿ ಭಾಗದೆಡೆ ತೆರಳಿದರು.

ಗಾಲ್ವೆ (ಐರ್ಲ್ಯಾಂಡ್) ನಲ್ಲಿ ನಿರ್ಮಿಸಿದ ಜಮಾಅತಿನ ಪ್ರಥಮ ಮಸೀದಿ ಮರಯಮ್‌ನ ದೂರ ಈ ಹೋಟೆಲ್‌ನಿಂದ ಒಂದು ಕಿ.ಮೀ. ಕ್ಕಿಂತಲೂ ಕಡಿಮೆ ಆಗಿತ್ತು.

8 ಗಂಟೆಗೆ ಹುಝೂರೆ ಅನ್ವರ್ ಮಸ್ಜಿದ್ ಮರಿಯಂ ಆಗಮಿಸಿ ಮಗ್ರಿಬ್ ಇಶಾಅ ನಮಾಝ್‌ಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ಎಲ್ಲಾ ಜಮಾಅತುಗಳಿಂದ ಬಂದ ಬಾಂಧವರು ಮಹಿಳೆಯರಿಗೂ ತನ್ನ ನೇತಾರರ ನೇತೃತ್ವದಲ್ಲಿ ಪ್ರಥಮ ಬಾರಿಗೆ ಈ ನವ ಮಸೀದಿಯಲ್ಲಿ ನಮಾಝ್ ನಿರ್ವಹಿಸುವ ಭಾಗ್ಯ ಪಡೆದರು. ಅವರಲ್ಲಿ ಕೆಲ ಜನರು ಪ್ರಥಮ ಬಾರಿಗೆ ಹುಝೂರರ ನೇತೃತ್ವದಲ್ಲಿ ನಮಾಝ್ ನಿರ್ವಹಿಸುವವರಾಗಿದ್ದರು. ಕೆಲವರ ಕಣ್ಣುಗಳು ಒದ್ದೆಗೊಂಡಿದ್ದವು. ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಅನುಗ್ರಹಿತರಾಗುತ್ತಿದ್ದರು ಮತ್ತು ತಮ್ಮ ಆಸೆಗಳನ್ನು ತೀರಿಸಿಕೊಳ್ಳುತ್ತಿದ್ದರು.

ನಮಾಝ್ ನಿರ್ವಹಣೆಯ ನಂತರ ಹುಝೂರೆ ಅನ್ವರ್ ನೆಷ್ನಲ್ ಸದರ್ ಸಾಹಿಬ್ ಐರ್ಲ್ಯಾಂಡ್ ಅವರಿಂದ ಮಸೀದಿಯ ಕುರಿತು ಮಾಹಿತಿಯನ್ನು ಪಡೆದರು. ಅನಂತರ ಹುಝೂರ್ ಮರಳಿ ಹೋಟೇಲಿಗೆ ತೆರಳಿದರು.

### 25 ಸೆಪ್ಟೆಂಬರ್ 2014 ಗುರುವಾರ

ಮುಂಜಾನೆ 6 ಗಂಟೆಗೆ ಹುಝೂರೆ ಅನ್ವರ್(ಅತಬಿಅ) "ಮಸ್ಜಿದ್ ಮರಿಯಂ," ಗೆ ಆಗಮಿಸಿ ನಮಾಝ್ ಫಜರ್ ನಿರ್ವಹಿಸಿಕೊಟ್ಟರು. ನಂತರ ಮರಳಿ ತಮ್ಮ ವಸತಿಯೆಡೆಗೆ ತೆರಳಿದರು.

ಹುಝೂರೆ ಅನ್ವರ್(ಅತಬಿಅ) ಇಲ್ಲಿ ಗಾಲ್ವೆಯ ವಾಸದ ನಡುವೆ ಡಬ್ಲಿನ್ Drogheda, Lucan, Cork & Athhoone S ಜಮಾತುಗಳಿಂದ ಹಲವು ಕುಟುಂಬಗಳು ಇಲ್ಲಿ ಆಗಮಿಸಿ ಆಸುಪಾಸಿನ ವಿವಿಧ ಹೋಟೆಲುಗಳಲ್ಲಿ ತಂಗಿದ್ದರು. ಕೆಲವರು ಸಮೀಪದ ಸ್ಥಳಗಳಲ್ಲಿ ತಂಗಿದ್ದರು. ಹುಝೂರ್‌ರವರ ನೇತೃತ್ವದಲ್ಲಿ ನಮಾಝುಗಳನ್ನು ನಿರ್ವಹಿಸುವ ಭಾಗ್ಯ ಪಡೆಯುತ್ತಿದ್ದಾರೆ. ತನ್ನ ಪ್ರೀತಿಯ ಇಮಾಮರ ಪವಿತ್ರ ಅಸ್ತಿತ್ವದಿಂದ ಅನುಗ್ರಹಗಳನ್ನು ಪಡೆಯುತ್ತಿದ್ದಾರೆ ಹಾಗೂ ಕಾರುಣ್ಯಗಳ ಮತ್ತು ಅಲ್ಲಾಹನ ಅನುಗ್ರಹಗಳನ್ನು ಪಡೆಯುವ ಯಾವ ಕ್ಷಣವನ್ನು ಸಹ ಕಳೆದುಕೊಳ್ಳಲು ಬಯಸುತ್ತಿಲ್ಲ. ತನ್ನ ಚಿಕ್ಕ ಮಕ್ಕಳೊಂದಿಗೆ ನಮಾಝುಗಳಲ್ಲಿ ಭಾಗವಹಿಸುತ್ತಿದ್ದಾರೆ.

ಮುಂಜಾನೆ ಹುಝೂರೆ ಅನ್ವರ್(ಅತಬಿಅ) ಕಚೇರಿಯ ಪತ್ರಗಳನ್ನು ಮತ್ತು ವರದಿಗಳನ್ನು ಪರಿಶೀಲಿಸಿ ನಿರ್ದೇಶನಗಳನ್ನು ನೀಡಿದರು. ನಂತರ ವಿವಿಧ ಕಛೇರಿ ಕೆಲಸಗಳನ್ನು ನಿರ್ವಹಿಸುವುದರಲ್ಲಿ ಮಗ್ನರಾದರು.

ನಂತರ ಕಾರ್ಯಕ್ರಮದನ್ವಯ 5 ಗಂಟೆಗೆ ಹುಝೂರೆ ಅನ್ವರ್ ಮಸ್ಜಿದ್ ಮರಿಯಂಗೆ ಆಗಮಿಸಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ನೆಷ್ನಲ್ ಸದರ್ ಸಾಹಿಬ್ ಐರ್ಲ್ಯಾಂಡ್ ಅವರಿಗೆ ದೂರ ಪ್ರದೇಶಗಳಿಂದ ಬಂದ ಅತಿಥಿಗಳ ವ್ಯವಸ್ಥೆಯ ಬಗ್ಗೆ ವಿಚಾರಿಸಿದರು. ಮಸ್ಜಿದ್ ಮರಿಯಂ ಉದ್ಘಾಟನಾ ಸಂದರ್ಭದಲ್ಲಿ ಯು.ಕೆ. ಯಿಂದ ಹಲವು ಜಮಾಅತ್ ಬಾಂಧವರು ಐರ್ಲ್ಯಾಂಡ್ ತಲುಪಿದರು. ಅತಿಥಿಗಳ ಬರುವಿಕೆ ಜಾರಿಯಲ್ಲಿದೆ. ಅನಂತರ ಅವರು ತನ್ನ ವಸತಿ ಭಾಗಕ್ಕೆ ತೆರಳಿದರು.

ಕಾರ್ಯಕ್ರಮದನ್ವಯ ಇಂದು ಸಂಜೆ ಕುಟುಂಬಗಳೊಡನೆ ಭೇಟಿ ಮಾಡಬೇಕಿತ್ತು, ಅದೇ ಹೋಟೆಲಿನ ಒಂದು ಭಾಗದಲ್ಲಿ ಸಮ್ಮೇಳನಕ್ಕಾಗಿ ಸ್ಥಳ ಪಡೆದು ಭೇಟಿಯ ವ್ಯವಸ್ಥೆ ಮಾಡಲಾಗಿತ್ತು.

### ಕುಟುಂಬ ಭೇಟಿಗಳು

ಆರು ಕಾಲು ಗಂಟೆಗೆ ಹುಝೂರೆ ಅನ್ವರ್ ಅವರು ಭೇಟಿ ಮಾಡಲು ಆಗಮಿಸಿದರು. ಇಂದು ಗಾಲ್ವೆ ಜಮಾಅತ್ ಅಲ್ಲದೇ Killanny, Limerick, Tralee, Ballin colling, Glanmine, Athlone ನ ಜಮಾಅತುಗಳಿಂದ

*(ಪುಟ 11 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.